5. ಚೆಕ್ಕು ಬಂದಿ: ಕಂದಾಯ ಇಲಾಖೆಯಿಂದ ಪಡೆಯುವುದು. Dishant application ಮೂಲಕ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಖಾತರಿಪಡಿಸಿಕೊಳ್ಳುವುದು.
6. ನೀರಿನ ಮೂಲದ ವಿವರ (ಸ್ವತ: ನೀರಿನ ಮೂಲ ಹೊಂದದೇ ಇದ್ದಲ್ಲಿ ಇತರರಿಂದ ನೀರು ಪಡೆಯುವ ಬಗ್ಗೆ ಒಪ್ಪಿಗೆ ಪತ್ರ ಸಲ್ಲಿಸುವುದು)
7. ನೀರು / ವಿದ್ಯುಚ್ಛಕ್ತಿ ಅಥವಾ ಇತರೆ ಶಕ್ತಿಮೂಲಗಳ ಲಭ್ಯತೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಖಾತರಿಪಡಿಸಿ ಕೊಳ್ಳಬೇಕಾಗಿರುತ್ತದೆ.
8. ಮಣ್ಣು ಮತ್ತು ನೀರಿನ ವಿಶ್ಲೇಷಣೆ ಪ್ರಮಾಣ ಪತ್ರ ಸಲ್ಲಿಸುವುದು(ಸರ್ಕಾರ ಸ್ವಾಮ್ಯ/ಅಂಗೀಕೃತ ಸಂಸ್ಥೆಗಳಿಂದ)
9. ಆಧಾರ್ ಕಾರ್ಡ್ ಪ್ರತಿ ಒದಗಿಸುವುದು.
10. ಇಲಾಖಾ ನೊಂದಾಯಿತ ಕಂಪನಿಯ ಇಂಜಿನಿಯರ್‌ರವರಿಂದ ದೃಢೀಕರಿಸಲ್ಪಟ್ಟ ವಿನ್ಯಾಸ ನೀಡುವುದು.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

11. ದರಪಟ್ಟಿಯನ್ನು ಹನಿ ನೀರಾವರಿ ಘಟಕ ಅಳವಡಿಸಿದ ಇಲಾಖಾ ಅನುಮೋದಿತ ಕಂಪನಿರವರಿಂದ ಮಾತ್ರ ಪಡೆಯುವುದು.

12. Pre-Sanction Order ನಲ್ಲಿ ನಮೂದಿಸಿರುವಂತೆ ರೈತರ ವಂತಿಕೆಯನ್ನು ಸಂಬಂಧಿತ ಹನಿ ನೀರಾವರಿ ಕಂಪನಿರವರ ಬ್ಯಾಂಕ್ ಖಾತೆಗೆ ಜಮೆ ಮಾಡಿರುವ ಬಗ್ಗೆ Online Payment Details ಅನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ರವರ ಕಛೇರಿಗೆ ಸಲ್ಲಿಸುವುದು. Reserve Bank of India (RBI) ರವರ ಮಾರ್ಗಸೂಚಿಯನ್ವಯ Digital payment ಅಡಿಯಲ್ಲಿ ರೈತರ ವಂತಿಕೆಯನ್ನು ಪಾವತಿಸಲು ಕ್ರಮವಹಿಸುವುದು (ಷರಾ: ರೈತರ ವಂತಿಕೆಯನ್ನು NEFT ಮುಖಾಂತರ ಪಾವತಿ ಮಾಡಲು ಹೆಚ್ಚಿನ ಆಧ್ಯತೆ ನೀಡಬೇಕಾಗಿರುತ್ತದೆ.)

13. ಫಲಾನುಭವಿಯು ಭಾರತ ಸರ್ಕಾರದ Indicative cost ( ಸೂಚಕ ಮೊತ್ತ) ಗೆ ತಗುಲುವ ವೆಚ್ಚಕ್ಕೆ ನೀಡಬೇಕಾದ ಶೇಕಡಾವಾರು (ಕಂಪನಿಗಳಿಗೆ ಸಹಾಯಧನ ಪಾವತಿ ಮಾಡುವ ಸಂದರ್ಭದಲ್ಲಿ) ರೈತರ ವಂತಿಕೆಯನ್ನು ಅಥವಾ ಪೂರ್ಣ ವೆಚ್ಚದ (ರೈತರಿಗೆ ಸಹಾಯಧನ ಪಾವತಿ ಮಾಡುವ ಸಂದರ್ಭದಲ್ಲಿ) ಕಂಪನಿಯವರಿಗೆ ಪಾವತಿಸಬೇಕಾಗಿರುತ್ತದೆ. ಮುಂದುವರೆದು, ತಾಕಿನಲ್ಲಿ ನೈಜವಾಗಿ ಅಳವಡಿಸುವ ಉಪಕರಣಗಳ ಒಟ್ಟಾರೆ ಮೊತ್ತವು Indicative cost ( ಸೂಚಕ ಮೊತ್ತ) ಕ್ಕಿಂತ ಹೆಚ್ಚಾದಲ್ಲಿ, ತಗುಲುವ ಹೆಚ್ಚುವರಿ ಮೊತ್ತವನ್ನು ಸಹ ರೈತರು ಕಂಪನಿಗಳಿಗೆ ಪಾವತಿಸಬೇಕಾಗಿರುತ್ತದೆ. **ಅನುಬಂಧ-19** ರಲ್ಲಿ ನೀಡಲಾಗಿದೆ.

14. **Pre Sanction Order ನಲ್ಲಿ ನಮೂದಿಸುವ ಮೊತ್ತವು ಅಂದಾಜು ಸಹಾಯಧನ (estimated subsidy)ವಾಗಿ ಪರಿಗಣಿಸಬೇಕಾಗಿರುತ್ತದೆ. ಪರಿಶೀಲನಾ ಅಧಿಕಾರಿಗಳ ತಾಕು ಪರಿಶೀಲನೆ ನಂತರ ಶಿಫಾರಸ್ಸು ಮಾಡುವ ಸಹಾಯಧನಕ್ಕೆ ಫಲಾನುಭವಿ ಹಾಗೂ ಕಂಪನಿ/ಸಂಸ್ಥೆಯವರು ಬದ್ಧರಾಗಿರತಕ್ಕದು.**

15. ಫಲಾನುಭವಿಯ ಬ್ಯಾಂಕ್ ಖಾತೆ ಸಂಖ್ಯೆ, IFSC code, ಇತ್ಯಾದಿಗಳನ್ನು ಸಲ್ಲಿಸುವುದು. ಸದರಿ ಖಾತೆಯೊಂದಿಗೆ ಆಧಾರ್ ಸಂಖ್ಯೆ ಲಿಂಕ್ ಆಗಿರಬೇಕು.

16. ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ, ತಾವು ಆಗಲೀ ಅಥವಾ ತಮ್ಮ ಕುಟುಂಬ ಸದಸ್ಯರಾಗಲೀ ಈ ಹಿಂದೆ ಸರ್ಕಾರದಿಂದ ಸೌಲಭ್ಯಗಳನ್ನು ಪಡೆದಿರುವ/ ಪಡೆಯದೇ ಇರುವ ಬಗ್ಗೆ ಘೋಷಣೆ ಪತ್ರ ಸಲ್ಲಿಸುವುದು.

17. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳು ಮೇಲಿನ ಎಲ್ಲಾ ದಾಖಲಾತಿಗಳೊಂದಿಗೆ RD ಸಂಖ್ಯೆ ಹೊಂದಿರುವ ಜಾತಿ ಪ್ರಮಾಣ ಪತ್ರವನ್ನು ಸಹ ಕಡ್ಡಾಯವಾಗಿ ನೀಡಬೇಕಾಗಿರುತ್ತದೆ.

**d)** ಇಲಾಖಾ ನೊಂದಾಯಿತ ಕಂಪನಿ/ಸಂಸ್ಥೆಯ ಇಂಜಿನಿಯರ್‌ರವರಿಂದ ಧೃಡೀಕರಿಸಲ್ಪಟ್ಟ ವಿನ್ಯಾಸವನ್ನು ಹಾಗೂ ದರಪಟ್ಟಿಯನ್ನು ಪರಿಶೀಲಿಸುವುದು.

**e) ಸಲ್ಲಿಸಲಾದ ಅರ್ಜಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸುವುದು.**

1. ಅರ್ಹ ಅರ್ಜಿದಾರರು ಈ ಹಿಂದೆ ನೀರಾವರಿ ಅಳವಡಿಕೆಗಾಗಿ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಪರಿಶೀಲಿಸಿ ಖಾತರಿ ಪಡಿಸಿಕೊಳ್ಳುವುದು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. (ಪ್ರತಿ ಫಲಾನುಭವಿಗೆ ಈ ಸೌಲಭ್ಯ 5.00 ಹೆಕ್ಟೇರ್ ಮೀರಿರಬಾರದು). ಈ ಬಗ್ಗೆ ಅರ್ಜಿಯಲ್ಲಿ ಉಲ್ಲೇಖಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ನೀಡಬೇಕು.
2. ಅರ್ಜಿದಾರರು ಹನಿ ನೀರಾವರಿ ಅಳವಡಿಸಲು ಪ್ರಸ್ತಾಪಿಸಿರುವ ಕಂಪನಿ/ಸಂಸ್ಥೆರವರು ಇಲಾಖೆಯಿಂದ ಅನುಮೋದಿತವಾಗಿರುವ ಕಾರ್ಯಾದೇಶಕ್ಕೆ ಶಿಫಾರಸ್ಸು ಮಾಡುವ ಮೊದಲೇ ರೇಷ್ಮೆ ಉಪನಿರ್ದೇಶಕರು(ಜಿಪಂ) ರವರು ಹಾಗೂ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು

ರೇಷ್ಮೆ ಉಪನಿರ್ದೇಶಕರು,
ಜಿ. ಪಂ. ಬಾಗಲಕೋಟ



CamScanner

3. ಪರಿಶೀಲಿಸುವುದಲ್ಲದೇ, ಸಂಬಂಧಿಸಿದ ಎಲ್ಲಾ ತಾಂತ್ರಿಕ ಸೇವಾ ಕೇಂದ್ರದ, ರೇಷ್ಮೆ ವಿಸ್ತರಣಾಧಿಕಾರಿಗಳು ಈ ಬಗ್ಗೆ ಖಚಿತಪಡಿಸಿಕೊಳ್ಳುವುದು.

4. ರೈತರು ಸಲ್ಲಿಸಿದ ಅರ್ಜಿಯನ್ನು ಕಂಪನಿಗಳಿಗೆ Bill of Quantities (BoQ) ಬಗ್ಗೆ ಮಾಹಿತಿ ನಮೂದಿಸಲು ಅರ್ಜಿದಾರರು ಈ ಹಿಂದೆ ಸಹಾಯಧನ ಪಡೆದಿರುವ (repetition) ಬಗ್ಗೆ ಪರಿಶೀಲಿಸುವುದು ತಾಂತ್ರಿಕ ಸೇವಾ ಕೇಂದ್ರದ ಕರ್ತವ್ಯವಾಗಿರುತ್ತದೆ. ಪಡೆದಿದ್ದಲ್ಲಿ/ಪಡೆಯದೇ ಇದ್ದಲ್ಲಿ ಅದರ ವಿವರ (ಸಹಾಯಧನ ಪಡೆದ ವರ್ಷ, ಬೆಳೆ, ಮೊತ್ತ, ಕಂಪನಿ, ಪ್ರದೇಶ, ಸರ್ವೇ ನಂ) ಕಡತದಲ್ಲಿ ದಾಖಲಿಸಿ, ಸದರಿ ಅಧಿಕಾರಿಯು ರೇಷ್ಮೆ ಸಹಾಯಕ ನಿರ್ದೇಶಕರು/ ರೇಷ್ಮೆ ಉಪನಿರ್ದೇಶಕರು (ಜಿಪಂ) ಗಮನಕ್ಕೆ ತರುವುದು. ಸದರಿ ಫಲಾನುಭವಿ ಈಗಾಗಲೇ 5.00 ಹೆಕ್ಟೇರ್ ಪಡೆದಿದಲ್ಲಿ ಅರ್ಜಿಯನ್ನು ತಿರಸ್ಕರಿಸುವ ಬಗ್ಗೆ ರೇಷ್ಮೆ ಉಪನಿರ್ದೇಶಕರು(ಜಿಪಂ)ರವರು ಸೂಕ್ತ ತೀರ್ಮಾನ ಕೈಗೊಳ್ಳುವುದು.

5. ಹನಿ ನೀರಾವರಿ ಪದ್ಧತಿಯ ಅಳವಡಿಕೆಯ ಮುನ್ನ ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಅರ್ಜಿದಾರರ ತಾಕನ್ನು ವೀಕ್ಷಿಸಿ, ಹನಿ ನೀರಾವರಿ ಘಟಕ ಅಳವಡಿಸಿರುವ ಬಗ್ಗೆ Pre-inspection GPS Photo ತೆಗೆಯುವುದು ಹಾಗೂ **(ಈ ವರದಿಯನ್ನು ನೀಡುವ ನಮೂನೆ-03ರ ಅನುಬಂಧ-07 ರಲ್ಲಿ ನೀಡಲಾಗಿದ)** ಈ ಕೆಳಕಂಡ ಅಂಶಗಳನ್ನು ಪರಿಶೀಲಿಸುವುದು.

   i. ಸಣ್ಣ ರೈತರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರು ಹಾಗೂ ಇತರೆ ರೈತರ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
   ii. ನೀರಿನ ಮೂಲ ಹಾಗೂ ವಿದ್ಯುತ್ ಅಥವಾ ಇತರೆ ಶಕ್ತಿಮೂಲಗಳ ಲಭ್ಯತೆ.
   iii. ಅರ್ಜಿದಾರರು/ಕುಟುಂಬದ ಸದಸ್ಯರೊಂದಿಗೆ ಜಮೀನಿನ ಜಿಪಿಎಸ್ ಫೋಟೋ ತೆಗೆದು ಸಲ್ಲಿಸುವುದು.
   iv. ತಾಕುವಿನ ವಿಸ್ತೀರ್ಣ, ಆಕಾರ, ಬೆಳೆ, ಮಣ್ಣು ಮತ್ತು ನೀರಿನ ಗುಣಮಟ್ಟ, ನೀರಿನ ಹಾಗೂ ವಿದ್ಯುತ್ ಅಥವಾ ಇತರೆ ಶಕ್ತಿಮೂಲಗಳ ಲಭ್ಯತೆಯನ್ನು ಆಧರಿಸಿ ಸಿದ್ಧಪಡಿಸಿದ ವಿನ್ಯಾಸವನ್ನು ತಯಾರಿಸಿ ಅದರ ಒಂದು ಪ್ರತಿಯನ್ನು ಕಡ್ಡಾಯವಾಗಿ ಕಡತದಲ್ಲಿರಿಸಬೇಕು.

f ಅರ್ಜಿದಾರರರು, ಸಲ್ಲಿಸಿರುವ ಎಲ್ಲಾ ವಿವರ ಹಾಗೂ ದಾಖಲಾತಿಗಳು ಸರಿ ಇರುವ ಬಗ್ಗೆ ಪರಿಶೀಲಿಸುವುದು.

## VIII. ಕಾರ್ಯಾದೇಶಕ್ಕಾಗಿ ಶಿಫಾರಸ್ಸು (ಅಧಿಕಾರಿಗಳಿಂದ):

i. ರೈತರು ಈ ಹಿಂದೆ ಸಹಾಯಧನ ಪಡೆದಿರುವ (repetition) ಬಗ್ಗೆ ಪರಿಶೀಲಿಸುವುದು ಹಾಗೂ ಜೇಷ್ಠತೆ ನಿರ್ವಹಣೆ ಮಾಡುವುದು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ವ್ಯತ್ಯಾಸವಿದ್ದಲ್ಲಿ, ಅದನ್ನು ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರುಗಳ ಮೂಲಕ ರೇಷ್ಮೆ ಉಪನಿರ್ದೇಶಕರು(ಜಿಪಂ)ರವರು ಅರ್ಜಿಯನ್ನು ತಿರಸ್ಕರಿಸಿ ಸೂಕ್ತ ಕಾರಣಗಳೊಂದಿಗೆ ಅಧೀನ ಕಚೇರಿಗಳಿಗೆ ಹಿಂದಿರುಗಿಸುವುದು.

ii. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಅರ್ಜಿಗಳನ್ನು ಸ್ವೀಕರಿಸಿದ ನಂತರ, ಅವುಗಳನ್ನು ವಹಿಯಲ್ಲಿ ನಮೂದಿಸಿಕೊಂಡು (ವಹಿಯ ನಮೂನೆ-02ನ್ನು ಅನುಬಂಧ-06ರಲ್ಲಿ ನೀಡಲಾಗಿದೆ), ಪ್ರತಿ ಅರ್ಜಿದಾರರಿಗೆ ಅನನ್ಯ ಸಂಖ್ಯೆ (Unique code) ಯನ್ನು ನೀಡುವುದು (ಅನನ್ಯ ಸಂಖ್ಯೆಯನ್ನು ನೀಡುವ ವಿಧಾನವನ್ನು ಅನುಬಂಧ-04ರಲ್ಲಿ ನೀಡಲಾಗಿದೆ ಹಾಗೂ ಪ್ರತಿ ಅರ್ಜಿದಾರರಿಗೆ ಪ್ರತ್ಯೇಕ ಕಡತವನ್ನು ತೆರೆಯುವುದು.

iii. ಕಂಪನಿ / ಸಂಸ್ಥೆಯವರು ಸಲ್ಲಿಸಲಾದ ಅರ್ಜಿ, ಸಲ್ಲಿಸಲಾದ ಇತರೆ ದಾಖಲಾತಿಗಳನ್ನು ಹಾಗೂ ದರಪಟ್ಟಿಯನ್ನು ಪರಿಶೀಲಿಸಿ, Pre Sanction Order ಅನ್ನು ನೀಡುವುದು. ಅದರಲ್ಲಿ ರೈತರ ವಂತಿಕೆ ಹಾಗೂ ಅಂದಾಜು ಸಹಾಯಧನದ ಬಗ್ಗೆ ಮಾಹಿತಿಯನ್ನು ನಮೂದಿಸಬೇಕಾಗಿರುತ್ತದೆ. (ನಮೂನೆ-13ನ್ನು ಅನುಬಂಧ-19ರಲ್ಲಿ ನೀಡಲಾಗಿದೆ).

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

iv. Pre Sanction Order ನಲ್ಲಿ ನಮೂದಿಸಿರುವ ರೈತರ ವಂತಿಕೆಯು ಕಂಪನಿ/ಸಂಸ್ಥೆಗೆ . Reserve Bank of India (RBI) ರವರ ಮಾರ್ಗಸೂಚಿಯನ್ವಯ Digital payment ಮುಖಾಂತರ ಪಾವತಿಸಿರುವ ಬಗ್ಗೆ UTR ಖಾತರಿಪಡಿಸಿಕೊಂಡು ಕಾರ್ಯಾದೇಶಕ್ಕಾಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರುಗಳ ಮೂಲಕ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ರವರಿಗೆ ಶಿಫಾರಸ್ಸು ಮಾಡುವುದು.

v. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಘಟಕ ಅಳವಡಿಕೆ ಮುನ್ನ ತಾಕನ್ನು ಪರಿಶೀಲಿಸಿ, ಪರಿಶೀಲನಾ ಅಧಿಕಾರಿಯ ಛಾಯಾಚಿತ್ರದೊಂದಿಗೆ Pre-inspection GPS Photoವನ್ನು ತೆಗೆಯುವುದು.

vi. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಶಿಫಾರಸ್ಸು ಮಾಡಲಾದ ಅರ್ಜಿ, ದಾಖಲಾತಿ, ರೈತರ ವಂತಿಕೆ ಪಾವತಿ ಬಗ್ಗೆ ಖಾತರಿಪಡಿಸಿಕೊಂಡು, ಅರ್ಹ ಫಲಾನುಭವಿಗೆ ಸಹಾಯಧನ ನೀಡುವ ಬಗ್ಗೆ ದೃಢೀಕರಿಸಿ, ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರ ಮುಖಾಂತರ ಶಿಫಾರಸ್ಸು ಮಾಡಿ, ಸಂಬಂಧಪಟ್ಟ ಕಡತವನ್ನು ರೇಷ್ಮೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು. ಅರ್ಜಿದಾರರು ಅರ್ಹರಿಲ್ಲದೇ ಇದ್ದ ಪಕ್ಷದಲ್ಲಿ ಅರ್ಜಿಯನ್ನು ತಿರಸ್ಕರಿಸಿ ಕಾರಣಗಳನ್ನು ನಮೂದಿಸಿ, ಅರ್ಜಿಯನ್ನು ಅರ್ಜಿದಾರರಿಗೆ ಹಿಂದಿರುಗಿಸುವುದು.

vii. ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರ ಕಛೇರಿಯಲ್ಲಿ ತಾಂತ್ರಿಕ ಸಹಾಯಕರು ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಕಾರ್ಯಾದೇಶವನ್ನು ನೀಡಲು ಕಡತವನ್ನು ರೇಷ್ಮೆ ಉಪ ನಿರ್ದೇಶಕರು (ಜಿಪಂ) ರವರಿಗೆ ಶಿಫಾರಸ್ಸು ಮಾಡುವುದು. ಕಾರ್ಯಾದೇಶ ಶಿಫಾರಸ್ಸು ಮಾಡುವ ಮುನ್ನ, ತಾಂತ್ರಿಕ ಸಹಾಯಕರು ಅರ್ಜಿದಾರರು ಹನಿ ನೀರಾವರಿ ಅಳವಡಿಕೆಗೆ ಸಹಾಯಧನವನ್ನು ಇತರೆ ತಾಲ್ಲೂಕುಗಳಲ್ಲಿ ಇತರೆ ಇಲಾಖೆಗಳಿಂದ (ಕೃಷಿ, ತೋಟಗಾರಿಕೆ ಹಾಗೂ ಸಂಬಂಧಿಸಿದ ಇನ್ನಿತರೆ ಇಲಾಖೆ) ಯಿಂದ ಪಡೆದಿದ್ದಾರೆಯೇ/ಇಲ್ಲವೇ ಎನ್ನುವುದರ ಬಗ್ಗೆ ಹಾಗೂ ಇವರ ಮಿತಿ 5.00 ಹೆಕ್ಟೇರ್ ಮೀರಿದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಪರಿಶೀಲಿಸಿ ಕಡತದಲ್ಲಿ ನಮೂದಿಸುವುದು. (ನಮೂನೆ-15, ಅನುಬಂಧ-22ನ್ನು ಕಡತದಲ್ಲಿರಿಸುವುದು)ಇದನ್ನು ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ರವರು ಖಾತರಿ ಪಡಿಸಿಕೊಂಡು ಅನುಮೋದಿಸುವುದು.

viii. ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರು ಸದರಿ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡು ಕಾರ್ಯಾದೇಶವನ್ನು ನೀಡುವುದು. ಸದರಿ ಕಾರ್ಯಾದೇಶದಲ್ಲಿ ಅಂದಾಜು ಸಹಾಯಧನ ಹಾಗೂ ರೈತರ ವಂತಿಕೆಯನ್ನು ಕಡ್ಡಾಯವಾಗಿ ನಮೂದಿಸುವುದು. ಅದರ ಪ್ರತಿಯನ್ನು ತಮ್ಮ ಸಹಿಯೊಂದಿಗೆ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು, ಕಂಪನಿ/ಸಂಸ್ಥೆಯವರಿಗೆ (ರೇಷ್ಮೆ ಸಹಾಯಕ ನಿರ್ದೇಶಕರ ಮೂಲಕ) ಹಾಗೂ ಅರ್ಜಿದಾರರಿಗೆ ನೀಡಬೇಕು ಹಾಗೂ ಟಿಪ್ಪಣಿಯನ್ನು ಅನುಮೋದಿಸಿ ಕಡತವನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಹಿಂದಿರುಗಿಸಬೇಕು.

ix. ಆಯಾ ಜಿಲ್ಲೆಗೆ ನಿಗದಿಯಾದ ಘಟಕವಾರು ಗುರಿ ಅನುಸಾರ ಕಾರ್ಯಾದೇಶ ನೀಡುವುದು. ಕಾರ್ಯಾದೇಶ ಕುರಿತಾಗಿ ಕಾಲಕಾಲಕ್ಕೆ ರೇಷ್ಮೆ ನಿರ್ದೇಶನಾಲಯದಿಂದ ಹೊರಡಿಸಲಾಗುವ ಆದೇಶ/ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

**IX. ಘಟಕ ಅಳವಡಿಕೆ:** ನಿಗದಿತ ಅವಧಿಯೊಳಗೆ ಕಂಪನಿ/ಸಂಸ್ಥೆಯವರು ನಿಗದಿತ ಅವಧಿಯೊಳಗೆ ಹನಿ ನೀರಾವರಿ

1. ಕಾರ್ಯಾದೇಶ ಪಡೆದ ನಂತರ ಕಂಪನಿ/ಸಂಸ್ಥೆಯವರು ನಿಗದಿತ ಅವಧಿಯೊಳಗೆ ಹನಿ ನೀರಾವರಿ ಘಟಕಗಳನ್ನು ಅಳವಡಿಸಿ, ಸಂಸ್ಥೆಯವರು ಕಾರ್ಯನಂತರ ದಾಖಾಲಾತಿಗಳಾದ Tax Invoice Bill ನೊಂದಿಗೆ Post inspection GPS Photo, e-way Bill, ಕಡತ ಸ್ವೀಕೃತಿ ಪ್ರತಿ ಹಾಗೂ ಕಾರ್ಯ ಪೂರ್ಣಗೊಂಡ ಬಗ್ಗೆ ಎಲ್ಲಾ ದಾಖಲಾತಿಗಳನ್ನು ಫಲಾನುಭವಿಯ ಮೂಲಕ 25 ದಿನಗಳ ಒಳಗಾಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು. ಕಡತವು ಪೂರ್ಣ ದಾಖಲಾತಿಗಳೊಂದಿಗೆ ಸಲ್ಲಿಕೆಯಾಗಿರುವ ಬಗ್ಗೆ ಕಡ್ಡಾಯವಾಗಿ ಸ್ವೀಕೃತಿ ಪ್ರತಿಯನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ನೀಡುವುದು. ಇಲ್ಲವಾದಲ್ಲಿ ಕಡತವನ್ನು ಹಿಂದಿರುಗಿಸಿ ಕೂಡಲೇ ಕ್ರಮಕೈಗೊಳ್ಳುವುದು. (ನಮೂನೆ-13ನ್ನು ಅನುಬಂಧ-18ರಲ್ಲಿ ನೀಡಲಾಗಿದೆ). (ಒಂದು ವೇಳೆ ಒಂದಕ್ಕಿಂತ ಹೆಚ್ಚು ಕಂತುಗಳಲ್ಲಿ ಸರಬರಾಜು ಮಾಡಿದ್ದಲ್ಲಿ ಪ್ರತಿ ಸರಬರಾಜಿಗೆ ಪ್ರತ್ಯೇಕ e-way bill ಇರತಕ್ಕದ್ದು ಹಾಗೂ e-way bill ಗಳ ಮೊತ್ತ ಹಾಗೂ Delivery challan ಮೊತ್ತಕ್ಕೆ ತಾಳೆಯಾಗತಕ್ಕದ್ದು)
2. ನಿಗದಿತ ಅವಧಿಯೊಳಗೆ ಕಂಪನಿ/ಸಂಸ್ಥೆಯವರು ಘಟಕ ಅಳವಡಿಕೆ ಮಾಡಿರುವ ಬಗ್ಗೆ ಅಧಿಕಾರಿಗಳು ಪರಿಶೀಲಿಸುವುದು ಆದ್ಯ ಕರ್ತವ್ಯವಾಗಿರುತ್ತದೆ.

**X. <u>ಕಂಪನಿ/ಸಂಸ್ಥೆರವರು ಕಾರ್ಯವನ್ನು ಪೂರ್ಣಗೊಳಿಸಿದ ನಂತರ, ಈ ಕೆಳಕಂಡ ದಾಖಲಾತಿಗಳನ್ನು ಅರ್ಜಿದಾರರಿಗೆ ತ್ರಿಪ್ರತಿಯಲ್ಲಿ ನೀಡಬೇಕು.</u>**

1. ಘಟಕ ಅಳವಡಿಕೆ ನಂತರ ಕಡತದೊಂದಿಗೆ ಸಹಾಯಧನಕ್ಕಾಗಿ ನಿಗದಿತ ನಮೂನೆಯಲ್ಲಿ ಅರ್ಜಿ. (ಅರ್ಜಿ ನಮೂನೆ-04ನ್ನು ಅನುಬಂಧ-08ರಲ್ಲಿ ನೀಡಲಾಗಿದೆ)
2. ಶಾಸನಬದ್ಧವಾದ Tax Invoice ಅನ್ನು ಕಂಪನಿ/ಸಂಸ್ಥೆರವರ ಸಹಿಯೊಂದಿಗೆ ಸಲ್ಲಿಸುವುದು.
3. ಇಲಾಖಾ ನೊಂದಾಯಿತ ಕಂಪನಿ/ ಸಂಸ್ಥೆರವರ ಇಂಜಿನಿಯರವರಿಂದ ದೃಢೀಕರಿಸಿದ ಹನಿ ನೀರಾವರಿ ಪದ್ಧತಿಯ ವಿನ್ಯಾಸ ಹಾಗೂ ಉಪಯೋಗಿಸಿದ ಪರಿಕರಗಳ ವಿವರ.
4. ನಗದು ಬಿಲ್ಲು (Tax invoice)
5. ಹಣ ಸಂದಾಯವಾದ ರಸೀದಿ & ಡೆಲಿವರಿ ಚಲನ್.
6. ಕಂಪನಿಯವರು ಕಾರ್ಯ ಪೂರ್ಣಗೊಂಡ ನಂತರದ(GPS Post-inspection photo) ಬೆಳೆ ಹಾಗೂ ಹನಿ ನೀರಾವರಿ ಘಟಕ ಕಾಣುವ ರೀತಿಯಲ್ಲಿ ತೆಗೆದ ಫೋಟೋ. ಫೋಟೋ ಪ್ರತಿಗಳಲ್ಲಿ Latitude ಮತ್ತು Longitude ನಮೂದಿಸಿರಬೇಕು.
7. ಕಂಪನಿ/ಸಂಸ್ಥೆರವರು ದೃಡೀಕರಣ ಮಾಡಿದ ಕಾರ್ಯ ಪೂರ್ಣಗೊಳಿಸಿದ ದೃಢೀಕರಣ ಪತ್ರ (Work completion report)ಕಡತದಲ್ಲಿ ಇರಿಸುವುದು. (ನಮೂನೆ-05 ನ್ನು ಅನುಬಂಧ-09 ರಲ್ಲಿ ನೀಡಲಾಗಿದೆ).
8. ಅರ್ಜಿದಾರರಿಗೆ ತರಬೇತಿ ನೀಡಿರುವ ಬಗ್ಗೆ ಪ್ರಮಾಣ ಪತ್ರ (ನಮೂನೆ-06ನ್ನು ಅನುಬಂಧ-10ರಲ್ಲಿ ನೀಡಲಾಗಿದೆ).
9. ಹನಿ ನೀರಾವರಿ ಘಟಕ ಅಳವಡಿಸಿದ ನಂತರ ನೊಂದಣಿ ಪ್ರಪತ್ರದನ್ವಯ ಕಂಪನಿ/ಸಂಸ್ಥೆಯವರು ಐದು (5) ವರ್ಷಗಳ ಕಾಲ ಘಟಕವನ್ನು ನಿರ್ವಹಣೆ ಮಾಡುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು. ರೈತರ ಬೇಡಿಕೆ ಅನುಸಾರ ಕಂಪನಿ/ಸಂಸ್ಥೆಯವರು ಕಡ್ಡಾಯವಾಗಿ ಘಟಕ ನಿರ್ವಹಣೆ ಮಾಡಬೇಕಾಗಿರುತ್ತದೆ. ನಿರ್ವಹಣೆ ಮಾಡಿರುವ ಬಗ್ಗೆ ರೈತರ ಧೃಢೀಕರಣದೊಂದಿಗೆ ಮಾಹಿತಿಯನ್ನು ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಅದನ್ನು ಸಂಬಂಧಪಟ್ಟ ಕಡತದಲ್ಲಿ ನಿರ್ವಹಿಸಬೇಕಾಗಿರುತ್ತದೆ.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

10. ಹನಿ ನೀರಾವರಿ ಘಟಕ ನಿರ್ವಹಣೆ ಕುರಿತಂತೆ ಅನುಮೋದಿತ ಸಂಸ್ಥೆ/ಕಂಪನಿಯು ಪ್ರತಿ ಜಿಲ್ಲೆಯಲ್ಲಿ ತಮ್ಮ Service Centres ಗಳನ್ನು ಹೊಂದಿರಬೇಕಾಗಿರುತ್ತದೆ. ಹನಿ ನೀರಾವರಿ ಸಂಸ್ಥೆಯವರು ರೈತರ ತಾಕುಗಳಲ್ಲಿ ಘಟಕ ಅಳವಡಿಸಿದ ನಂತರ ರೈತರಿಗೆ ಘಟಕದಲ್ಲಿ ತಾಂತ್ರಿಕ ತೊಂದರೆ ಎದುರಾದಲ್ಲಿ, ಘಟಕದ ಬಿಡಿಭಾಗಗಳು ಹಾಳಾದಲ್ಲಿ ಘಟಕ ನಿರ್ವಹಣೆ ಕುರಿತು ಮಾಹಿತಿ ಒದಗಿಸುವ ಕೆಲಸವನ್ನು ಈ Service Centres ಗಳು ಕೈಗೊಳ್ಳಬೇಕು ಹಾಗೂ ರೈತರು ದೂರು ದಾಖಲಿಸಲು / ಮಾಹಿತಿ ಪಡೆಯಲು Toll-free ನಂಬರ್‌ಗಳ ವಿವರವನ್ನು ಹೊಂದಿರುವ ಕರಪತ್ರ (broucher) ರೈತರಿಗೆ ಹಾಗೂ ತಾಂತ್ರಿಕ ಸೇವಾ ಕೇಂದ್ರ ಕಛೇರಿಗಳಿಗೆ ಸಹಾಯಧನಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀಡಬೇಕಾಗಿರುತ್ತದೆ.

11. ಉಪಕರಣಗಳ ಗುಣಮಟ್ಟ, service centres ತೆರೆದಿರುವ ಬಗ್ಗೆ ಮತ್ತು company toll free ಸಂಖ್ಯೆಯು ನಿಖರವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ವಿಭಾಗೀಯ ಜಂಟಿ ನಿರ್ದೇಶಕರು ಮಾಹೆವಾರು ಸ್ಥಳ ಪರಿಶೀಲನೆಯನ್ನು ಕೈಗೊಳ್ಳುವುದು. ಈ ಬಗ್ಗೆ ರೈತರಿಂದ ಸ್ವೀಕೃತವಾಗಿರುವ ದೂರುಗಳು, ಕ್ರಮಕೈಗೊಂಡ ಕ್ರಮದ ಬಗ್ಗೆ ಪ್ರತಿ ಮಾಹೆ 5ನೇ ತಾರೀಖಿನೊಳಗಾಗಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು. ಕಂಪನಿಗಳು ಗುಣಮಟ್ಟದ ಉಪಕರಣಗಳನ್ನು ಅಳವಡಿಸದೇ ಇದ್ದಲ್ಲಿ, ಸರಿಯಾದ ನಿರ್ವಹಣೆ ಕೈಗೊಳ್ಳದಿದ್ದಲ್ಲಿ ಹಾಗೂ ಸಹಾಯವಾಣಿ ಮತ್ತು service centers ಗಳು ಕಾರ್ಯನಿರ್ವಹಿಸದಿದ್ದಲ್ಲಿ ಅಂತಹ ಕಂಪನಿಗಳ ವಿರುದ್ಧ ನಿಯಮಾನುದಾರ ಕ್ರಮವಹಿಸುವುದು.

12. ಗ್ಯಾರಂಟಿ/ವಾರೆಂಟಿ ಪ್ರಮಾಣ ಪತ್ರ (ನಮೂನೆ-8ನ್ನು ಅನುಬಂಧ-12ರಲ್ಲಿ ನೀಡಲಾಗಿದೆ)

13. ಕಂಪನಿ/ಸಂಸ್ಥೆಯವರು ಘಟಕ ಅಳವಡಿಕೆ ಮಾಡುವಾಗ ಪರಿಶೀಲಿಸಬೇಕಾದ ಅಂಶಗಳ ಕುರಿತು ಮಾಹಿತಿಯನ್ನು (ನಮೂನೆ-13ನ್ನು ಅನುಬಂಧ-18ರಲ್ಲಿ ನೀಡಲಾಗಿದೆ) ಸಲ್ಲಿಸುವುದು.

14. ಫಲಾನುಭವಿವಾರು e-way ಬಿಲ್ಲು ಕಡ್ಡಾಯವಾಗಿ ಕಂಪನಿರವರು ಸಲ್ಲಿಸತಕ್ಕದ್ದು (ಮೊತ್ತದ ಮಿತಿ ಇರುವುದಿಲ್ಲ)

**XI.** **ಅರ್ಜಿದಾರರು ಕಂಪನಿ/ಸಂಸ್ಥೆರವರು ನೀಡಿದ ಎಲ್ಲಾ ದಾಖಲಾತಿಗಳಿಗೆ ಸಹಿ ಮಾಡಿ ಇವುಗಳೊಡನೆ ಈ ಕೆಳಕಂಡ ದಾಖಲಾತಿಗಳನ್ನು ತ್ರಿಪ್ರತಿಗಳಲ್ಲಿ ಕಾರ್ಯಾದೇಶ ಪಡೆದ ನಿಗದಿತ ದಿನಾಂಕದೊಳಗಾಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.**

1. ಬ್ಯಾಂಕ್‌ನಿಂದ ಪಡೆದ ಸಾಲದ ವಿವರಗಳು (ಹನಿ ನೀರಾವರಿ ಅಳವಡಿಕೆಗಾಗಿ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಲ್ಲಿ)
2. ಕಂಪನಿ/ಸಂಸ್ಥೆಯವರು ತೃಪ್ತಿಕರವಾಗಿ ಹನಿ ನೀರಾವರಿ ಘಟಕ ಅಳವಡಿಸಿರುವ ಬಗ್ಗೆ ಪ್ರಮಾಣ ಪತ್ರ **(ನಮೂನೆ-05ನ್ನು ಅನುಬಂಧ-09 ರಲ್ಲಿ ನೀಡಲಾಗಿದೆ)**.
3. ಹನಿ ನೀರಾವರಿ ಘಟಕವನ್ನು ಸದ್ಬಳಕೆ ಮಾಡುವ ಹಾಗೂ ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ರೂ.20/-ಗಳ ಛಾಪಾ ಕಾಗದದಲ್ಲಿ ಘೋಷಣೆ **(ನಮೂನೆ-8ನ್ನು ಅನುಬಂಧ-12ರಲ್ಲಿ ನೀಡಲಾಗಿದೆ)**
4. ಫಲಾನುಭವಿವಾರು e-way ಬಿಲ್ಲು ಕಡ್ಡಾಯವಾಗಿ ಕಂಪನಿರವರು ಸಲ್ಲಿಸತಕ್ಕದ್ದು (ಮೊತ್ತದ ಮಿತಿ ಇರುವುದಿಲ್ಲ)
5. ಒಂದು ವೇಳೆ ರೈತರು ಹನಿ ನೀರಾವರಿ ಘಟಕ ಅಳವಡಿಸಲು ಪೂರ್ಣ ಹಣ ಭರಿಸದೇ ತನ್ನ ಬಾಬ್ತಿನ ಹಣ ಮಾತ್ರ ಪಾವತಿಸಿ, ನಿರಾಕ್ಷೇಪಣಾ ಪತ್ರ (No-objection certificate) **(ನಮೂನೆ-11 ಅನುಬಂಧ-16ರಲ್ಲಿ ನೀಡಲಾಗಿದೆ)** ವನ್ನು ನೀಡಿ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಸಹಿ ಮಾಡಿ ಸಲ್ಲಿಸುವುದು.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

ಸಂಬಂಧಿಸಿದ ಕಂಪನಿ/ಸಂಸ್ಥೆಯವರ ಬ್ಯಾಂಕ್ ಖಾತೆ ಸಂಖ್ಯೆ, ಖಾತೆಯ ವಿವರ (IFSC Code ನೊಂದಿಗೆ)ವನ್ನು ನಮೂದಿಸಿರುವುದು.

## XII ಸಹಾಯಧನ ಕಡತ ಹಾಗೂ ತಾಕು ಪರಿಶೀಲನೆ (ಅಧಿಕಾರಿಗಳು):

1. ಕಂಪನಿ/ಸಂಸ್ಥೆಗಳು ನೀಡುವ ಕಡತಗಳನ್ನು ವಹಿಯಲ್ಲಿ ದಾಖಲು ಮಾಡಿ(ನಮೂನೆ-09ನ್ನು ಅನುಬಂಧ-06ರಲ್ಲಿ ನೀಡಲಾಗಿದೆ) ಸ್ವೀಕೃತ ಪತ್ರವನ್ನು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ನೀಡುವುದು ಹಾಗೂ Checklist ಪ್ರಕಾರ ದಾಖಲಾತಿಗಳನ್ನು ಪರಿಶೀಲಿಸುವುದು. ಕಂಪನಿಗಳು ಸಲ್ಲಿಸಿದ್ದ ದಾಖಲಾತಿಗಳ ಕೊರತೆ ಇದ್ದಲ್ಲಿ ಕಡತವನ್ನು ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು/ ರೇಷ್ಮೆ ಉಪನಿರ್ದೇಶಕರು ಜಿಲ್ಲಾ ಪಂಚಾಯತ್ ರವರ ಗಮನಕ್ಕೆ ತಂದು ಹಿಂದಿರುಗಿಸುವುದು ತಾಲ್ಲೂಕು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ಇದರಂತೆ ಜೇಷ್ಠತೆಯನ್ನು ಪರಿಗಣಿಸುವುದು.
2. ಅರ್ಜಿದಾರರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಈ ಹಿಂದೆ ನೋಂದಣಿ ಸಮಯದಲ್ಲಿ ಸಲ್ಲಿಸಿದ ದಾಖಲಾತಿಗಳೊಂದಿಗೆ ಸೇರಿಸಿ ಸಂಬಂಧಿಸಿದ ಅಧಿಕಾರಿಗಳು ಕಡತ ನಿರ್ವಹಿಸುವುದು.
3. ನಂತರ ಸಂಬಂಧಪಟ್ಟ ಅಧಿಕಾರಿಗಳು ಹನಿ ನೀರಾವರಿ ಘಟಕ ಅಳವಡಿಸಿರುವ ತಾಕನ್ನು Inspection kit ನೊಂದಿಗೆ ( Inspection kit ರಲ್ಲಿ – digital screw gauge-OD/ID test, dial gauge-thickness and Go-no-go gaugeಗಳನ್ನು ಹೊಂದಿರಬೇಕು)ತಪಾಸಣೆ ಮಾಡುವುದು. ಅದಕ್ಕೆ ಸಂಬಂಧಿಸಿದಂತೆ ತಪಾಸಣಾ ವರದಿಯಲ್ಲಿ ನಮೂದಿಸುವುದು.(ನಮೂನೆ-10, ಅನುಬಂಧ - 13)
4. ವಿನ್ಯಾಸ ಮತ್ತು ಬಿಲ್‌ನಲ್ಲಿ ನೀಡಿದ ಪರಿಮಾಣದಲ್ಲೇ ತಾಕಿನಲ್ಲಿ ಘಟಕ ಅಳವಡಿಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಿ ದೃಢೀಕರಿಸುವುದು (ಪರಿಶೀಲನಾ ಅಧಿಕಾರಿಗಳಿಂದ).
6. ಹನಿ ನೀರಾವರಿ ಘಟಕದಲ್ಲಿ ಅಳವಡಿಸಿದ ಸಾಮಗ್ರಿಗಳು BIS ಗುಣಮಟ್ಟದಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು (ISI mark). CML ಸಂಖ್ಯೆ , Batch number, ಉತ್ಪಾದನಾ ದಿನಾಂಕ ವಿವರಗಳನ್ನು ತಪಾಸಣಾ ನಮೂನೆಯಲ್ಲಿ ನಮೂದಿಸುವುದು.
7. ಬೆಳೆ ಹಾಗೂ ಬೆಳೆಯ ಅಂತರ, ಲ್ಯಾಟರಲ್ ಹಾಗೂ ಎಮಿಟರ್ ಗಳ ಪರಿಮಾಣ ಹಾಗೂ ಅಂತರವನ್ನು ಪರಿಶೀಲಿಸಿ, ನಮೂದಿಸುವುದು.
8. ಹನಿ ನೀರಾವರಿ ಘಟಕವು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು. (ಎಲ್ಲಾ ಹನಿಕೆಗಳಲ್ಲಿ ಸಮನಾಗಿ ನೀರು ಪ್ರವಹಿಸುತ್ತಿರುವ ಬಗ್ಗೆ ಪರಿಶೀಲಿಸುವುದು, ಶೇ.10ಕ್ಕಿಂತ ಕಡಿಮೆ ವ್ಯತ್ಯಾಸ ಇದ್ದಲ್ಲಿ ಪರಿಗಣಿಸುವುದು)
9. ಹನಿ ನೀರಾವರಿ ಘಟಕ ಅಳವಡಿಸಿದ ಬೆಳೆಯ ತಾಕಿನಲ್ಲಿ ಅರ್ಜಿದಾರರು/ಕುಟುಂಬ ಸದಸ್ಯರೊಡನೆ ಪರಿಶೀಲನಾ ಅಧಿಕಾರಿಗಳು ಸೇರಿದಂತೆ ಇರುವ post-inspection GPS ಫೋಟೊವನ್ನು ತೆಗೆಯುವುದು.
10. ಅಧಿಕಾರಿಗಳು ತಾಕು ಪರಿಶೀಲನೆ ಮಾಡಿರುವ ಬಗ್ಗೆ Check Measurement ನಲ್ಲಿ ಕಡ್ಡಾಯವಾಗಿ ನಮೂದಿಸುವುದು ಹಾಗೂ ಎಲ್ಲಾ ಹಂತದ ಅಧಿಕಾರಿಗಳು ವಹಿಯನ್ನು ನಿರ್ವಹಿಸತಕ್ಕದ್ದು.
11. ಸಹಾಯಧನ ಲೆಕ್ಕಾಚಾರ ಮಾಡುವಾಗ ವಿನ್ಯಾಸದಲ್ಲಿ, ಬಿಲ್ಲಿನಲ್ಲಿ, ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ವಿವಿಧ ಅಂತರಗಳಲ್ಲಿ ವಿವಿಧ ವಿಸ್ತೀರ್ಣಕ್ಕೆ ಅಗತ್ಯವಿರುವ ಪರಿಕರಗಳ ಅಂದಾಜು ಪ್ರಮಾಣ ಹಾಗೂ ತಾಕುವಿನಲ್ಲಿ ನೈಜವಾಗಿ ಅಳವಡಿಸಿದ ವಿವಿಧ ಪರಿಕರಗಳ ಪ್ರಮಾಣ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸಿ ಇಲಾಖೆ ನಿಗದಿಪಡಿಸಿದ ದರಗಳನ್ನಾಧಾರಿಸಿ ಶೇಕಡಾವಾರು ಸಹಾಯಧನವನ್ನು



ರೇಷ್ಮೆ ಉಪನಿರ್ದೇಶಕರು

ಲೆಕ್ಕಾಚಾರ ಮಾಡುವುದು. ಅದನ್ನು ಭಾರತ ಸರ್ಕಾರ ಸೂಚಿಸಿರುವ ಆಯಾ ಅಂತರದ (ಲ್ಯಾಟರಲ್ಸ್ ಮತ್ತು ಎಮಿಟರ್ ಗಳ ಅಂತರ) ಹಾಗೂ ವಿಸ್ತೀರ್ಣಕ್ಕೆ ನೀಡಲಾದ ಘಟಕ ವೆಚ್ಚದ ಮಿತಿಯೊಳಗೆ (Indicative cost) ಪರಿಗಣಿಸಿ ಸಹಾಯಧನ ಪ್ರಮಾಣವನ್ನು ನಿರ್ಧರಿಸುವುದು (ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು). PMKSY- ಹನಿ ನೀರಾವರಿ ಯೋಜನೆಯಡಿ ಭಾರತ ಸರ್ಕಾರವು ವಿವಿಧ ಅಂತರ ಹಾಗೂ ವಿವಿಧ ಪ್ರದೇಶಕ್ಕೆ ನೀಡಿರುವ Indicative cost ಪ್ರಕಾರ ಪಾವತಿಸಬಹುದಾದ ಗರಿಷ್ಠ ಸಹಾಯಧನ ಕುರಿತು ಲೆಕ್ಕಾಚಾರ ಬಗ್ಗೆ ಅನುಬಂಧ–14ರಲ್ಲಿ ನೀಡಲಾಗಿದೆ. ಅದರಂತೆ ಕ್ರಮವಹಿಸುವುದು

12. ಅಂತರ ಬೆಳೆಗಳು ಇದ್ದು, ಅವುಗಳಿಗೆ ಹನಿ ನೀರಾವರಿ ಘಟಕ ಅಳವಡಿಸಿದ್ದಲ್ಲಿ ರೈತರ ಹಿತದೃಷ್ಟಿಯಿಂದ ಅರ್ಜಿಯಲ್ಲಿ ನಮೂದಿಸಿದ ಬೆಳೆಗೆ ಅನುಗುಣವಾಗಿ ಕನಿಷ್ಠ ಅಂತರದ ಬೆಳೆಗೆ ಸಹಾಯಧನವನ್ನು ಲೆಕ್ಕಾಚಾರ ಮಾಡಿ ಭಾರತ ಸರ್ಕಾರವು ನಿಗದಿಪಡಿಸಿದ ಮಿತಿಗೆ ಒಳಪಟ್ಟು ಸಹಾಯಧನ ಪರಿಗಣಿಸುವುದು. ಭಾರತ ಸರ್ಕಾರದ ಪ್ರಕಾರ ವಿಸ್ತೀರ್ಣಗಳಲ್ಲಿ ಹಾಗೂ ವಿವಿಧ ವಿಸ್ತೀರ್ಣಕ್ಕೆ ಅಗತ್ಯವಿರುವ ವಿವಿಧ ಪರಿಕರಗಳ ಅಂದಾಜು ಪ್ರಮಾಣದ ವಿವರಗಳನ್ನು ಅನುಬಂಧ-15ರಲ್ಲಿ ನೀಡಲಾಗಿದೆ. ವಿವಿಧ ಅಂತರ ಹಾಗೂ ವಿಸ್ತೀರ್ಣಕ್ಕೆ ಘಟಕ ವೆಚ್ಚವು ಅನುಬಂಧ-2ರಲ್ಲಿ ನೀಡಲಾಗಿದೆ.

13. ಸಹಾಯಧನಕ್ಕಾಗಿ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರವರಿಗೆ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರರವರು ನಿಗದಿತ ಅವಧಿಯೊಳಗೆ ಶಿಫಾರಸ್ಸು ಮಾಡುವುದು. (ನಮೂನೆ-10ನ್ನು ಅನುಬಂಧ-13ರಲ್ಲಿ ನೀಡಲಾಗಿದೆ)

14. ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ತಾಕು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಕಡತದಲ್ಲಿ ನಿಗದಿತ ಅವಧಿಯೊಳಗೆ ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರಿಗೆ ಶಿಫಾರಸ್ಸು ಮಾಡುವುದು. **(ನಮೂನೆ-10ನ್ನು ಅನುಬಂಧ-13ರಲ್ಲಿ ನೀಡಲಾಗಿದೆ)**

15. ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರು ತಾಕು ಹಾಗೂ ದಾಖಲಾತಿಗಳನ್ನು ನಿಗದಿತ ಅವಧಿಯೊಳಗೆ ಪರಿಶೀಲಿಸಬೇಕಾಗಿರುತ್ತದೆ **(ನಮೂನೆ-10ನ್ನು ಅನುಬಂಧ-13ರಲ್ಲಿ ನೀಡಲಾಗಿದೆ**

**<u>ಸೂಚನೆ:</u>** ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು 07 ದಿನಗಳ ಒಳಗಾಗಿ ತಾಕು ಪರಿಶೀಲನೆ ಮಾಡುವುದು(Post-inspection) . ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ತಾಕನ್ನು ಪರಿಶೀಲಿಸಿ, ಸಹಾಯಧನವನ್ನು ಮುಂದಿನ ಹಂತದ ಅಧಿಕಾರಿರವರಿಗೆ ನಿಯಾಮನುಸಾರ ಶಿಫಾರಸ್ಸು ಮಾಡುವುದಲ್ಲದೇ, ಪರಿಶೀಲನೆ ಕೈಗೊಳ್ಳದೇ ಇರುವ ಅಧಿಕಾರಿಯ ಮೇಲೆ ಶಿಸ್ತು ಕ್ರಮಕ್ಕಾಗಿ ಶಿಫಾರಸ್ಸು ಮಾಡುವುದು.

14. ಇಲಾಖೆಯಿಂದ ನೀಡಲಾದ ಆರ್ಥಿಕ ಪ್ರತ್ಯಾಧಿಕಾರದ ಅನ್ವಯ ಸಹಾಯಧನವನ್ನು ಮಂಜೂರು ಮಾಡುವುದು. ಅದರ ಒಂದು ಪ್ರತಿಯನ್ನು ಕಡತದಲ್ಲಿರಿಸಿ ರೇಷ್ಮೆ ಉಪನಿರ್ದೇಶಕರು/ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರ ಮೂಲಕ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳ ಕಛೇರಿಗೆ ಕಡತವನ್ನು ಹಿಂದಿರುಗಿಸಬೇಕಾಗಿರುತ್ತದೆ

15. ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರುಗಳು ಇದೇ ಕಡತದಲ್ಲಿ ಸಾದಿಲ್ವಾರು ಬಿಲ್ಲನ್ನು ಸಿದ್ಧಪಡಿಸಿ, ಕಡತದ ಸಮೇತ ಮೇಲು ಸಹಿಗಾಗಿ ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರ ಕಛೇರಿಗೆ ಸಲ್ಲಿಸಬೇಕು.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

16.ರೇಷ್ಮೆ ಉಪ ನಿರ್ದೇಶಕರು (ಜಿಪಂ)ರವರು ನಿಯಮಾನುಸಾರ ಸಾದಿಲ್ವಾರು ಬಿಲ್ಲುಗಳಿಗೆ ಮೇಲು ಸಹಿ ಮಾಡುವುದು. (ಬಿಲ್ಲಿನ ಒಂದು ಪ್ರತಿಯನ್ನು ಕಛೇರಿಯ ಕಡತದಲ್ಲಿ ನಿರ್ವಹಿಸುವುದು)

17.ಮೂಲ ಕಡತವನ್ನು ಮೇಲು ಸಹಿ ಮಾಡಿದ ಸಾದಿಲ್ವಾರು ಬಿಲ್ಲಿನೊಂದಿಗೆ ವಿಭಾಗೀಯ ಸಹಾಯಕ ನಿರ್ದೇಶಕರುಗಳಿಗೆ ಹಿಂದಿರುಗಿಸುವುದು. ರೇಷ್ಮೆ ಸಹಾಯಕ ನಿರ್ದೇಶಕರು, ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಹನಿನೀರಾವರಿ ಅಳವಡಿಕೆಗೆ ಸಹಾಯಧನ ನೀಡಿದ ರೇಷ್ಮೆ ಬೆಳೆಗಾರರ ಕಡತದಲ್ಲಿ ಬಿಲ್ಲಿನ ಒಂದು ಪ್ರತಿಯನ್ನು ಇರಿಸಲು ಸೂಚಿಸಿ ಕಳುಹಿಸುವುದು.

18.ರೇಷ್ಮೆ ಉಪ ನಿರ್ದೇಶಕರು (ಜಿಪಂ) ಹಾಗೂ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು, ರೈತರು ಘಟಕದ ಪೂರ್ಣ ವೆಚ್ಚ ಭರಿಸಿದ್ದಲ್ಲಿ, DBT ಖಜಾನೆ-2 ಮುಖಾಂತರ ಅರ್ಜಿದಾರರು ಹೊಂದಿದ ಆಧಾರ್ ಲಿಂಕ್ಡ್ ಬ್ಯಾಂಕ್ ಖಾತೆಗೆ ಸಹಾಯಧನ ಸಂದಾಯ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

19.ರೈತ ಫಲಾನುಭವಿ ಹನಿ ನೀರಾವರಿ ಘಟಕ ಅಳವಡಿಸಲು ಸಾಲ ಪಡೆದಿದ್ದಲ್ಲಿ ಸದರಿ ಫಲಾನುಭವಿಗಳ ಸಾಲದ ಖಾತೆಗೆ ಜಮಾ ಮಾಡಲು ಕ್ರಮವಹಿಸುವುದು (ಇತರೆ ಯಾವುದೇ ರೀತಿಯ ಸಾಲಗಳಿಗೆ ಸರಿದೂಗಿಸಬಾರದು).

20.ರೈತರು ಹನಿ ನೀರಾವರಿ ಘಟಕವನ್ನು ಅಳವಡಿಸಲು ಪೂರ್ಣ ಹಣ ಭರಿಸಲು ಸಾಧ್ಯವಾಗದೇ ಇದ್ದ ಸಂದರ್ಭದಲ್ಲಿ ಹಾಗೂ ರೈತರ ಬಾಬ್ತಿನ ಹಣ ಮಾತ್ರ ಪಾವತಿಸಿ, ನಿರಾಕ್ಷೇಪಣಾ ಪತ್ರ [(No-objection Certificate) (ನಮೂನೆ-11ನ್ನು ಅನುಬಂಧ-16ರಲ್ಲಿ ನೀಡಲಾಗಿದೆ) ವನ್ನು ರೇಷ್ಮೆ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಸಹಿ ಮಾಡಿ ನೀಡಿದ್ದಲ್ಲಿ, ಸಹಾಯಧನ ಮೊತ್ತವನ್ನು ಘಟಕ ಅಳವಡಿಸಿದ ಕಂಪನಿ/ಸಂಸ್ಥೆಗೆ ಪಾವತಿಸಬಹುದು.

21. ಕಾಯಾದೇಶ ನೀಡಿದಾಗ, Pre-sanction order ನೀಡಿದಾಗ, ಮಂಜೂರಾತಿ ಆದೇಶ ಹೊರಡಿಸಿದಾಗ ಹಾಗೂ ಸಹಾಯಧನ ಪಾವತಿಸಲಾದ ಮೊತ್ತದ ವಿವರ SMS ಮೂಲಕ ಹಾಗೂ ಲಿಖಿತ ರೂಪದಲ್ಲಿ ಫಲಾನುಭವಿಗೆ ಕಡ್ಡಾಯವಾಗಿ ತಿಳಿಸುವುದು..

## XIII. Penalty Clause:-

ರೈತರಿಗೆ ಹನಿ ನೀರಾವರಿ ಘಟಕದ ಅನುಷ್ಠಾನದ ಕುರಿತು ಸಮಸ್ಯೆಗಳು ಬಂದಲ್ಲಿ, ರೈತರಿಗೆ ಅಗತ್ಯ ಮಾಹಿತಿ ನೀಡದೇ ಇದ್ದಲ್ಲಿ, ವಿನ್ಯಾಸದಲ್ಲಿ ಯಾವುದೇ ಲೋಪದೋಷಗಳು ಉಂಟಾದಲ್ಲಿ, ಘಟಕ ಅಳವಡಿಕೆ ಹಾಗೂ ದಾಖಲಾತಿಗಳಲ್ಲಿ ಯಾವುದೇ ಲೋಪದೋಷಗಳು ಇದ್ದಲ್ಲಿ ನಿಗದಿತ ಸಮಯದ ಒಳಗಾಗಿ ಘಟಕ ಅಳವಡಿಸದೆ ಇದ್ದಲ್ಲಿ, ನಿಗದಿತ ಅವಧಿಯೊಳಗೆ ದಾಖಲಾತಿಗಳು ತಾಲ್ಲೂಕು ಕಚೇರಿಗೆ ಸಲ್ಲಿಸದೇ ಇದ್ದಲ್ಲಿ, ಗುಣಮಟ್ಟದ ಉಪಕರಣಗಳನ್ನು ಅಳವಡಿಸದೇ ಇದ್ದಲ್ಲಿ, ಸರಿಯಾದ ನಿರ್ವಹಣೆ ಕೈಗೊಳ್ಳದಿದ್ದಲ್ಲಿ ಹಾಗೂ ಸಹಾಯವಾಣಿ ಮತ್ತು Service centers ಗಳು ಕಾರ್ಯರೂಪದಲ್ಲಿ ಇಲ್ಲದಿದ್ದಲ್ಲಿ ಅಂತಹ ಕಂಪನಿ/ಸಂಸ್ಥೆಯ ವಿರುದ್ಧ ನೋಂದಣಿ ಪ್ರಪತ್ರದ ಷರತ್ತು ಮತ್ತು ನಿಬಂಧನೆಗಳನ್ವಯ ಹಾಗೂ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ನಿಯಾಮನುಸಾರ ಕಪ್ಪುಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡುವುದು.

ಕಂಪನಿ/ಸಂಸ್ಥೆಯವರು ಕಡ್ಡಾಯವಾಗಿ ಘಟಕ ನಿರ್ವಹಣೆ ಬಗ್ಗೆ User manualನನ್ನು ಸ್ಥಳೀಯ ಭಾಷೆಯಲ್ಲಿ ಮುದ್ರಿಸಿ ಫಲಾನುಭವಿಗೆ ನೀಡಬೇಕಾಗಿರುತ್ತದೆ.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

## XIV. ಅನುದಾನ ವಿನಿಯೋಗ ಪ್ರಮುಖಾಂಶಗಳು:-

1) 2022-23ನೇ ಸಾಲಿಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ (PMKSY) ಹನಿ ನೀರಾವರಿ ಕಾರ್ಯಕ್ರಮದಡಿ ಜಿಲ್ಲಾವಾರು ನಿಗದಿಪಡಿಸಿದ ಅನುದಾನದಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ರೇಷ್ಮೆ ನಿರ್ದೇಶನಾಲಯದಿಂದ ಅನುಮತಿ ಪಡೆಯದೆ ಮಾಡತಕ್ಕದ್ದಲ್ಲ.

2) ಕ್ರಿಯಾಯೋಜನೆ ಪ್ರಕಾರ ವಿವಿಧ ಪ್ರದೇಶ, ವಿವಿಧ ವರ್ಗ (ಸಣ್ಣ/ ಅತೀ ಸಣ್ಣ / ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಮಹಿಳೆಯರು ಮತ್ತು ಇತರರು) ಹಾಗೂ ವಿವಿಧ ಘಟಕಗಳನ್ವಯ (ಹನಿ ನೀರಾವರಿ) ಭೌತಿಕ ಹಾಗೂ ಆರ್ಥಿಕ ಗುರಿಗಳ ಪ್ರಕಾರವೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ಯಾವುದೇ ರೀತಿಯ ಬದಲಾವಣೆಗೆ ರೇಷ್ಮೆ ನಿರ್ದೇಶನಾಲಯದ ಅನುಮತಿ ಪಡೆಯತಕ್ಕದ್ದು.

3) ಈ ಯೋಜನೆಯನ್ನು ಜಿಲ್ಲಾಮಟ್ಟದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಲ್ಲಿ (District Level Implementation Committee-DLIC) ಅನುಮೋದನೆಯಾಗುವ ಜಿಲ್ಲಾ ನೀರಾವರಿ ಯೋಜನೆ (District Irrigation Plan-DIP)ಯಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

## XV ಆರ್ಥಿಕ ಪ್ರತ್ಯಾಯೋಜನೆ (Delegation of Power) :

ಈ ಯೋಜನೆಯಡಿ 5.00 ಹೆಕ್ಟೇರ್ ವರೆಗಿನ ಹನಿ ನೀರಾವರಿ ಸಹಾಯಧನವನ್ನು ಮಾರ್ಗಸೂಚಿಯಂತೆ ಫಲಾನುಭವಿಗೆ ಮಂಜೂರು ಮಾಡಲು ಇಲಾಖೆಯಿಂದ ನೀಡಲಾದ ಆರ್ಥಿಕ ಪ್ರತ್ಯಾಯೋಜನೆಯನ್ವಯ ಕ್ರಮವಹಿಸುವುದು.

## XVI. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು (Reporting and documentation).

1) ರೇಷ್ಮೆ ಉಪ ನಿರ್ದೇಶಕರು ಹಾಗೂ ರೇಷ್ಮೆ ಸಹಾಯಕ ನಿರ್ದೇಶಕರುಗಳು ರಾಜ್ಯ ಸರ್ಕಾರದ New Decision Support System (NDSS) ತಂತ್ರಾಂಶದಲ್ಲಿ ಜಿಲ್ಲಾವಾರು ಗುರಿಗಳು, ಬಿಡುಗಡೆ ಹಾಗೂ ಪ್ರಗತಿಯನ್ನು ನಿಯಮಿತವಾಗಿ ಕಡ್ಡಾಯವಾಗಿ ದಾಖಲಿಸುವುದು.

2) ಪ್ರತಿ ಮಾಹೆಯ ಜಿಲ್ಲಾವಾರು ಹಾಗೂ ಕ್ರೋಢೀಕೃತ ಪ್ರಗತಿ ವರದಿಯನ್ನು ಖಜಾನೆ-2 ಪ್ರಕಾರ ನಿಗದಿತ ನಮೂನೆಗಳಲ್ಲಿ ರೇಷ್ಮೆ ನಿರ್ದೇಶನಾಲಯಕ್ಕೆ ಇ-ಮೇಲ್ ಮುಖಾಂತರ ಪ್ರತಿ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು.

3) ಅಂತಿಮ ಪ್ರಗತಿ ವರದಿಯನ್ನು ಜಿಲ್ಲಾವಾರು, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ರೇಷ್ಮೆ ನಿರ್ದೇಶನಾಲಯಕ್ಕೆ ದಿನಾಂಕ: 05-04-2023ರ ಒಳಗಾಗಿ ತಪ್ಪದೇ ಸಲ್ಲಿಸುವುದು.

4) ವರ್ಷಾಂತ್ಯದಲ್ಲಿ ಖಜಾನೆ-2 ಪ್ರಕಾರ ಭರಿಸಿದ ವೆಚ್ಚದ ಮೊತ್ತದಲ್ಲಿ ಕೇಂದ್ರ ಹಾಗೂ ರಾಜ್ಯ ಪಾಲಿನ ಮೊತ್ತವನ್ನು ಪ್ರತ್ಯೇಕವಾಗಿ ಲೆಕ್ಕಾ ತಪಾಸಣೆ ಮಾಡಿಸಿ, ದೃಢೀಕೃತ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರ (GFR-12C Format ಅನ್ನು ಅನುಬಂಧ-03ರಲ್ಲಿ ನೀಡಲಾಗಿದೆ) ವನ್ನು ವರ್ಷಾಂತ್ಯದ ಒಂದು ತಿಂಗಳ ಒಳಗಾಗಿ ಸಲ್ಲಿಸುವುದು. ನಿಗದಿತ ನಮೂನೆಯಲ್ಲಿ ಅಗತ್ಯ ಸಹಿಯೊಂದಿಗೆ GFR -12C Format ಅನ್ನು ಸಲ್ಲಿಸುವುದು, ಜಿಲ್ಲೆಯ ಜಿಲ್ಲಾಪಂಚಾಯತ್ ರೇಷ್ಮೆ ಉಪನಿರ್ದೇಶಕ ಕರ್ತವ್ಯವಾಗಿರುತ್ತದೆ.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. [illegible]

## XVII ಗಮನಿಸಬೇಕಾದ ಅಂಶಗಳು:

1.ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಫಲಾನುಭವಿಯನ್ನು ಗುರುತಿಸುವಲ್ಲಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಹಾಗೂ ಕಂಪನಿ/ಸಂಸ್ಥೆಗಳು ವೈಯಕ್ತಿಕ ಗಮನಹರಿಸಿ ಸಹಾಯಧನವು ದುರುಪಯೋಗವಾಗದಂತೆ ಖಾತರಿ ಪಡಿಸಿಕೊಳ್ಳುವುದು.

2.ಭಾರತ ಸರ್ಕಾರದ ಮಾರ್ಗಸೂಚಿಯನ್ವಯ "the OI activities must be linked with Micro Irrigation to make potential use of the available funds for higher water use efficiency" ಎಂದು ತಿಳಿಸಲಾಗಿರುತ್ತದೆ. ಅದರಂತೆ ಜಲಾನಯನ ಅಭಿವೃದ್ಧಿಇಲಾಖೆ ಅಥವಾ ತೋಟಗಾರಿಕೆ ಇಲಾಖೆಯಿಂದ ನೀಡಲಾಗಿರುವ ಕೃಷಿ ಹೊಂಡಗಳನ್ನು ಉಪಯೋಗಿಸಿಕೊಂಡು ಹನಿ ನೀರಾವರಿ ಮೂಲಕ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

3. ರೈತರು 1.00 ಹೆಕ್ಟೇರ್ ಪ್ರದೇಶದವರೆಗೂ ತಾಕುವಿನಲ್ಲಿ ಲ್ಯಾಟರಲ್ 12mm ಹಾಗೂ 16mm emitting pipe ಅಳವಡಿಸಬಹುದು.
4. ಎಲ್ಲಾ ವರ್ಗದ ರೈತ ಫಲಾನುಭವಿಗಳು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. SCSP ಹಾಗೂ TSP ಘಟಕಗಳ ಗುರಿಯಂತೆ ಕಡ್ಡಾಯವಾಗಿ ಸಂಬಂಧಪಟ್ಟ ವರ್ಗದ ರೈತರಿಗೆ ಸಹಾಯಧನ ನೀಡುವುದು. ಮಹಿಳೆಯರಿಗೆ ನಿಯಮಾನುಸಾರ ಆದ್ಯತೆ ನೀಡುವುದು ಹಾಗೂ ಮಹಿಳೆಯರಿಗೆ ಒಟ್ಟು ಅನುದಾನದ ಶೇ.30ರಷ್ಟು ಮೀಸಲಿಡುವುದು. ಸಣ್ಣ/ಅತಿ ಸಣ್ಣ ರೈತರಿಗೆ ಕನಿಷ್ಠ ಶೇ.50ರಷ್ಟು ಅನುದಾನವನ್ನು ಮೀಸಲಿಡುವುದು ಹಾಗೂ ಅದರಂತೆ ಪ್ರಗತಿ ಸಾಧಿಸುವುದು.
5. ಜಿಲ್ಲೆಯ ರೇಷ್ಮೆ ಉಪ ನಿರ್ದೇಶಕರು (ಜಿಪಂ) ಹಾಗೂ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಮತ್ತು ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ ರವರು ಕೇಂದ್ರ ಪುರಸ್ಕೃತ ಹನಿ ನೀರಾವರಿ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಹೆಚ್ಚಿನ ಪ್ರಚಾರ ಕೈಗೊಳ್ಳುವುದು.
6. SCSP ಹಾಗೂ TSP ಫಲಾನುಭವಿಗೆ ವಿವಿಧ ನಿಗಮ ಮತ್ತು ಮಂಡಳಿಗಳಿಂದ ಕೊಳವೆ ಬಾವಿ ಕೊರೆಸಿ ವಿದ್ಯುದ್ದೀಕರಣಗೊಳಿಸಿದ ಫಲಾನುಭವಿಗಳ ಪಟ್ಟಿಯನ್ನು ಪಡೆದು ಘಟಕ ಅಳವಡಿಕೆಗೆ ಪ್ರೋತ್ಸಾಹ ನೀಡಿ ಜಿಲ್ಲೆಗಳಿಗೆ ನಿಗದಿಯಾಗಿರುವ ಗುರಿಗೆ ಸಂಪೂರ್ಣ ಪ್ರಗತಿ ಸಾಧಿಸುವುದು.
7. ಅರ್ಜಿದಾರರು "ರೇಷ್ಮೆ ರೈತ ಉತ್ಪಾದಕರ ಸಂಸ್ಥೆ" " [Farmers' Producer Organization (FPO)] ಮತ್ತು "ಆಸಕ್ತ ರೇಷ್ಮೆ ಬೆಳೆಗಾರರ ಗುಂಪು" [Farmers' Interest Group (FIG)] ಸದಸ್ಯರಿಗೆ ಆದ್ಯತೆ ನೀಡುವುದು.
8. ಪ್ರತಿ ರೈತ ಫಲಾನುಭವಿಯು, ಈ ಹಿಂದೆ ಸಹಾಯಧನ ಪಡೆದಿದ್ದಲ್ಲಿ ಅದನ್ನೂ ಸೇರಿದಂತೆ, ಗರಿಷ್ಠ 5.00 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
9. **ದಿ:11-08-2020ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳುರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ 7 ವರ್ಷಗಳ ನಂತರ ಅದೇ ಜಮೀನಿಗೆ ಸಹಾಯಧನ ಪಡೆಯುವ ಬಗ್ಗೆ ಚರ್ಚಿಸಲಾಗಿ, ಹೊಸ ಫಲಾನುಭವಿಗಳಿಗೆ ಮಾತ್ರ ಸಹಾಯಧನ ನೀಡಬಹುದು ಎಂದು ತೀರ್ಮಾನಿಸಲಾಗಿರುತ್ತದೆ. ಅದರಂತೆ ಕ್ರಮವಹಿಸುವುದು.**

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ



CamScanner

10. ಸಹಾಯಧನ ಪಾವತಿ ಮಾಡುವಾಗ ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ಇತರೆ ರೈತರ ವರ್ಗಕ್ಕೆ ಸೇರಿರುವ ಬಗ್ಗೆ ಖಾತರಿಪಡಿಸಿಕೊಂಡು, ತಿಳಿಸಿರುವ ಅನುಪಾತದಂತೆ ಸಹಾಯಧನ ನೀಡಲು ಕ್ರಮ ವಹಿಸುವುದು.

11. ಕಾರ್ಯಾದೇಶ ನೀಡುವ ಸಂದರ್ಭದಲ್ಲಿ ಹಿಂದಿನ ಸಾಲಿನಲ್ಲಿ ಬಾಕಿ ಉಳಿದ ಅರ್ಜಿಗಳನ್ನು ಗಮನದಲ್ಲಿ ಇಟ್ಟುಕೊಂಡು ಪ್ರಸಕ್ತ ಸಾಲಿನಲ್ಲಿ ಕಾರ್ಯಾದೇಶ ನೀಡಬೇಕಾಗಿರುತ್ತದೆ, ತಪ್ಪಿದ್ದಲ್ಲಿ, ಇದಕ್ಕೆ ಸಂಬಂಧಪಟ್ಟ ರೇಷ್ಮೆ ಉಪ ನಿರ್ದೇಶಕರು (ಜಿಪಂ) ಹಾಗೂ ಸಂಬಂಧಪಟ್ಟ ಅಧಿಕಾರಿಗಳು ನೇರ ಜವಾಬ್ದಾರರಾಗಿರುತ್ತಾರೆ.

12. ತಾಕು ಪರಿಶೀಲನೆ ಈ ಕೆಳಕಂಡಂತೆ ಇರುವುದು (ಶೇ.ವಾರು): (ನಮೂನೆ-14,ಅನುಬಂಧ-20ರಲ್ಲಿ ದಾಖಲಿಸುವುದು)

   a. ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ– ಶೇ.100ರಷ್ಟು
   b. ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು – ಶೇ.50ರಷ್ಟು
   c. ರೇಷ್ಮೆ ಉಪ ನಿರ್ದೇಶಕರು (ಜಿಪಂ) – ಶೇ.10ರಷ್ಟು
   d. ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರು – ಶೇ.5ರಷ್ಟು (ಎಲ್ಲಾ ಅಧೀನ ಜಿಲ್ಲೆಗಳು ಸೇರಿದಂತೆ)
   e. ನೋಡಲ್ ಅಧಿಕಾರಿಗಳು – ಶೇ.1ರಷ್ಟು (Random ಆಗಿ)

> **ಸೂಚನೆ:** ಪರಿಶೀಲನಾ ಅಧಿಕಾರಿಗಳು Check measurement ನಮೂನೆಯಲ್ಲಿ ಪರಿಶೀಲನಾ ವಿವರವನ್ನು ನಮೂದಿಸುವುದಲ್ಲದೇ, ಸದರಿರವರ ಪ್ರವಾಸ ದಿನಚರಿಯಲ್ಲಿ ದಾಖಲಿಸುವುದು.

13. ಯೋಜನೆಗೆ ನಿಗಧಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.

14. ಫಲಾನುಭವಿಯು ತಮ್ಮ ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿದ/ಅರ್ಜಿ ಸಲ್ಲಿಸಿದ ನಂತರ ನಿಯಮಾನುಸಾರ ಅನುದಾನ ಲಭ್ಯತೆ ಆಧಾರಿಸಿ, ಜೇಷ್ಠತೆ ಮೇರೆಗೆ ಸಹಾಯಧನವನ್ನು ವಿತರಿಸುವುದು. ಈ ಬಗ್ಗೆ ಸಂಬಂಧಿಸಿದ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಹಾಗೂ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ರವರು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

15. ತಾಕು ಪರಿಶೀಲನಾ ಸಂದರ್ಭದಲ್ಲಿ ಹನಿ ನೀರಾವರಿ ಪದ್ಧತಿಯನ್ನು ಬಿಲ್ಲಿನಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೆ ಅಳವಡಿಸಿರುವ ಬಗ್ಗೆ ಖಾತರಪಡಿಸಿಕೊಳ್ಳುವುದು. ಅದರಂತೆ ಸಹಾಯಧನಕ್ಕೆ ಶಿಫಾರಸ್ಸು ಮಾಡಬೇಕು. ಸಹಾಯಧನ ವಿಸ್ತೀರ್ಣದಲ್ಲಿ ಕೆಲವೊಂದು ಗಿಡಗಳು ಇಲ್ಲದಿದ್ದಲ್ಲಿ, ಗಿಡ ನೆಡುವಿಕೆ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.

16. ಅರ್ಜಿ ವಿಲೇವಾರಿಯ ಪ್ರಕ್ರಿಯೆಯಂತೆ ನಿಗದಿತ ಅವಧಿಯೊಳಗಾಗಿ ಇತ್ಯರ್ಥಪಡಿಸಿ ಸಹಾಯಧನಕ್ಕಾಗಿ ಕ್ರಮವಹಿಸುವುದು.

17. ಹನಿ ನೀರಾವರಿ ಘಟಕ್ಕೆ ಸಹಾಯಧನ ಪಡೆದಿರುವ ಬಗ್ಗೆ ಪುರ್ನವರ್ತನೆ (repeatation)ಯನ್ನು ಪರಿಶೀಲಿಸಲು ಕೃಷಿ, ತೋಟಗಾರಿಕೆ ಹಾಗೂ ಇತರೆ ಇಲಾಖೆಗಳಿಂದ No-objection Certificate(NoC)ಯನ್ನು ಪಡೆದು ಖಾತರಿಪಡಿಸಿಕೊಂಡು ನಂತರ ಸಹಾಯಧನ ವಿತರಿಸುವುದು.

18. ಕಂಪನಿ/ಸಂಸ್ಥೆಯವರು ನೀಡಲಾದ user manual ರನ್ವಯ ಫಲಾನುಭವಿಯು ಘಟಕ ನಿರ್ವಹಣೆ ಮಾಡಬೇಕಾಗಿರುತ್ತದೆ

19. ಘಟಕ ಅಳವಡಿಕೆ ನಂತರ ಫಲಾನುಭವಿಯು ಕಡ್ಡಾಯವಾಗಿ ಘಟಕದ ಉಪಯೋಗವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಸಹಾಯಧನ ಪಡೆದ ನಂತರ ಘಟಕವನ್ನು ಬೇರೊಂದು ಸ್ಥಳಕ್ಕೆ ವರ್ಗಾಹಿಸುವುದು ಅಥವಾ ಮಾರಾಟ ಮಾಡದಿರುವ ಬಗ್ಗೆ ದೃಡೀಕರಣ ನೀಡಬೇಕಾಗಿರುತ್ತದೆ (ನಮೂನೆ-10 ಅನುಬಂಧ-13ರಲ್ಲಿ).

20. ಇಲಾಖಾ ಮಾರ್ಗಸೂಚಿಯ ಜೊತೆಗೆ ಕ್ರಮ ಸಂಖ್ಯೆ XVIIIರ ಅಂಶ(8)ನ್ನು ಹೊರತುಪಡಿಸಿ, ಭಾರತ ಸರ್ಕಾರದ ಮಾರ್ಗಸೂಚಿಯನ್ನು (Operational Guidelines of PMKSY) ಪಾಲಿಸುವುದು.

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟೆ



CamScanner

21. ಜಿಲ್ಲೆಗಳಲ್ಲಿ/ ತಾಲ್ಲೂಕುಗಳಲ್ಲಿ ಇಲಾಖೆಯು ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಹಾಗೂ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಉಲ್ಲಂಘನೆಗೆ ಆಸ್ಪದವಿರುವುದಿಲ್ಲ.

22. ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ, ಫೆಬ್ರವರಿ 15ರ ಒಳಗಾಗಿ 3ನೇ ತ್ರೈಮಾಸಿಕದ (3rd trimaster) ಒಳಗಾಗಿ ಅನುದಾನದ ಬೇಡಿಕೆಯನ್ವಯ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು, ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

# 2022-23ನೇ ಸಾಲಿನ ಜಿಲ್ಲಾವಲಯ (ಜಿಲ್ಲಾ /ತಾಲ್ಲೂಕು ಪಂಚಾಯತ್) ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.



**ಕರ್ನಾಟಕ ಸರ್ಕಾರ**
**ರೇಷ್ಮೆ ಇಲಾಖೆ**

ಸಂ: ಯೋಜನೆ/ಪಿಎಸ್3/ಜಿಪಂ–ತಾಪಂ/ಮಾಸೂ/56/21–22

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಚೇರಿ
ಬೆಂಗಳೂರು. ದಿನಾಂಕ:15.11.2021

**ಸುತ್ತೋಲೆ**

ವಿಷಯ: 2022–23ನೇ ಸಾಲಿನ ಜಿಲ್ಲಾವಲಯ (ಜಿಲ್ಲಾ/ತಾಲ್ಲೂಕು ಪಂಚಾಯತ್) ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.

2022–23ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಯೋಜನೆಗಳಡಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

**I. ಜಿಲ್ಲಾ ಪಂಚಾಯತ್ ಯೋಜನೆಗಳು:**

**ಅ. ರೇಷ್ಮೆ ಬೆಳೆಗಾರರಿಗೆ ಸಹಾಯಧನ ಲೆಕ್ಕಶೀರ್ಷಿಕೆ 2851–00–104–0–30**

2022–23ನೇ ಸಾಲಿನ ಆಯವ್ಯಯದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ /ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಈ ಕೆಳಕಂಡ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸುವುದು, ಶೇ.33ರಷ್ಟು ಆಯವ್ಯಯವನ್ನು ಮಹಿಳಾ ಫಲಾನುಭವಿಗಳಿಗೆ, ಶೇ.17.15ರಷ್ಟನ್ನು ಪರಿಶಿಷ್ಟ ಜಾತಿ, ಶೇ.6.95ರಷ್ಟು ಪರಿಶಿಷ್ಟ ಪಂಗಡದವರಿಗೆ ಹಾಗೂ ಶೇ.15ರಷ್ಟು ಅಲ್ಪ ಸಂಖ್ಯಾತ ವರ್ಗದವರಿಗೆ ಮೀಸಲಾಗಿರಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಮಾಡುವುದು.

ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಅವಶ್ಯವಿರುವ ಅನುದಾನವನ್ನು ರೇಷ್ಮೆ ವಸ್ತು ಪ್ರದರ್ಶನ/ಕಾರ್ಯಾಗಾರ/ವಿಚಾರ ಸಂಕಿರಣ, ಅದೇ ರೀತಿ ತಾಲ್ಲೂಕು ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಅವಶ್ಯವಿರುವ ಅನುದಾನವನ್ನು ತಾಂತ್ರಿಕ ಸಲಹೆಗಳು, ಪ್ರದರ್ಶನಗಳು, ಪ್ರಚಾರ, ಶ್ರವಣ ಮತ್ತು ದೃಶ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಣ ಒದಗಿಸಿಕೊಂಡು, ಉಳಿಕೆಯಾಗುವ ಅನುದಾನದಲ್ಲಿ MGNREGA ಮಾನದಂಡಗಳ ಅರ್ಹತೆ ಮೀರಿದ ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ನಾಟಿ ಮತ್ತು ಹಿಪ್ಪುನೇರಳೆ ನರ್ಸರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಹಾಗೂ ರೋಗ ನಿಯಂತ್ರಣ ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆ ತಯಾರಿಸುವುದು. ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರವರಿಂದ ತಾಂತ್ರಿಕ ಅನುಮೋದನೆಯನ್ನು ಹಾಗೂ ಜಿಲ್ಲಾ ಪಂಚಾಯತ್‌ವತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.



ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

CamScanner

**ಫಲಾನುಭವಿಗಳ ಆಯ್ಕೆ ಮತ್ತು ಕ್ರಿಯಾಯೋಜನೆ ತಯಾರಿಕೆ :**

- ಹಿಪ್ಪುನೇರಳೆ ನಾಟಿ / ಹಿಪ್ಪುನೇರಳೆ ನರ್ಸರಿ ಮಾಡುವ ಫಲಾನುಭವಿಗಳ ಆಯ್ಕೆಯನ್ನು ಏಪ್ರಿಲ್ – ಮೇ 2022ರ ಒಳಗೆ ಮಾಡುವುದು.
- ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರುಗಳಿಂದ ಅನುಮೋದನೆ ಪಡೆಯುವುದು.
- ಅನುಮೋದಿತ ಪಟ್ಟಿಯ ಒಂದು ಪ್ರತಿಯನ್ನು ಯೋಜನಾ ಶಾಖೆ, ರೇಷ್ಮೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- ಹಿಪ್ಪುನೇರಳೆ ನಾಟಿ ಕಾರ್ಯಕ್ರಮವನ್ನು ಸೆಪ್ಟೆಂಬರ್ – 2022ರ ಮಾಹೆಯ ಒಳಗಾಗಿ ಪೂರ್ಣಗೊಳಿಸುವುದು.
- ಹಿಪ್ಪುನೇರಳೆ ನರ್ಸರಿ ಬೆಳೆಸುವ ರೈತರು, ಹಿಪ್ಪುನೇರಳೆ ಸಸಿ ವಿತರಿಸುವ ಕುರಿತು ವಿತರಣಾ ಪಟ್ಟಿಯನ್ನು ಸಲ್ಲಿಸುವುದು.
- ಹಿಪ್ಪುನೇರಳೆ ನಾಟಿಯನ್ನು ನೇರವಾಗಿ ಹಿಪ್ಪುನೇರಳೆ ಕಡ್ಡಿ ನಾಟಿ ಮಾಡುವ / ನರ್ಸರಿಯಿಂದ ಸಸಿ ಪಡೆದು ನಾಟಿ ಮಾಡುವ ಕುರಿತು, ಬಿತ್ತನೆ ಕಡ್ಡಿ/ನರ್ಸರಿ ಸಸಿ ಪಡೆದ ಮೂಲದ ವಿವರ ಸಹ ಸಲ್ಲಿಸುವುದು.
- ರೋಗ ನಿಯಂತ್ರಣ ಕಾರ್ಯಕ್ರಮಕ್ಕೆ ಋತುವಿಗೆ ಅನುಗುಣವಾಗಿ ಅವಶ್ಯವಿರುವ ಸಿಂಪರಕಗಳನ್ನು ಮಾತ್ರ ಪಡೆಯುವುದು. ವ್ಯಾಪ್ತಿಯಲ್ಲಿ ಬರುವ ರೇಷ್ಮೆ ಬೆಳೆಗಾರರು ಮತ್ತು ಹಿಪ್ಪುನೇರಳೆ ಕ್ಷೇತ್ರವನ್ನು ಗಮನದಲ್ಲಿ ಇರಿಸಿಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡಿ ಸಂಬಂಧಿಸಿದ ಜಂಟಿ ನಿರ್ದೇಶಕರಿಂದ ಅನುಮೋದನೆ ಪಡೆಯುವುದು.
- ರೋಗ ನಿಯಂತ್ರಣಕ್ಕಾಗಿ ಪಡೆದ ಸಿಂಪರಕಗಳನ್ನು ದಾಸ್ತಾನು ವಹಿಯಲ್ಲಿ ದಾಖಲಿಸುವುದು ಮತ್ತು ವಿತರಣೆ ಮಾಡಿದ ನಂತರ ವಿತರಣಾ ವಹಿಯಲ್ಲಿಯೂ ಸಹ ದಾಖಲಿಸುವುದು.
- ಅವಧಿ ಮೀರಿದ ಸೋಂಕು ನಿವಾರಕಗಳು/ಸಿಂಪರಕಗಳನ್ನು ಯಾವುದೇ ಕಾರಣಕ್ಕೂ ಪಡೆಯಬಾರದು ಹಾಗೂ ವಿತರಿಸಬಾರದು.

**1. ಹಿಪ್ಪುನೇರಳೆ ನರ್ಸರಿ:**

ಹಿಪ್ಪುನೇರಳೆ ತೋಟ ಸ್ಥಾಪನೆಗೆ ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳು ಸದೃಢವಾಗಿ ಬೇರುಬಿಟ್ಟಿದ್ದು, ಆರೋಗ್ಯಕರವಾಗಿ 4 ತಿಂಗಳವರೆಗೆ ಬೆಳೆದ ಹಿಪ್ಪುನೇರಳೆ ಸಸಿ ನಾಟಿ ಮಾಡುವುದರಿಂದ ಹಿಪ್ಪುನೇರಳೆ ತೋಟ ಸ್ಥಾಪನೆಯಲ್ಲಿ ತಪ್ಪು ಗುಳಿಗಳಾಗುವುದಿಲ್ಲ, ನರ್ಸರಿ ಬೆಳೆಸುವುದು ಒಂದು ಲಾಭದಾಯಕ ಕಸುಬಾಗಿರುವುದರಿಂದ, ವಾಣಿಜ್ಯ ಪ್ರಮಾಣದಲ್ಲಿ ಸಸಿ ಬೆಳೆಸುವುದನ್ನು ಪ್ರೋತ್ಸಾಹಿಸಲು ಸಹಾಯ ನೀಡಲಾಗುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನರ್ಸರಿ (ಎಕರೆ) | 1.50 | 1.125(75%) | 1.35(90%) |



ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟೆ

- ತೋಟದಲ್ಲಿ ಒಂದೇ ಮಟ್ಟದ ಸಸಿಗಳು ಸಮ ಪ್ರಮಾಣದಲ್ಲಿ ಬೆಳೆದು ಉತ್ಕೃಷ್ಟ ಸೊಪ್ಪು ನೀಡುತ್ತವೆ.
- ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳ ಬದುಕುವ ಸಾಮರ್ಥ್ಯತೆ ಹೆಚ್ಚಿರುತ್ತದೆ.
- ಸಸಿಯಿಂದ ಸ್ಥಾಪಿತವಾಗುವ ತೋಟಕ್ಕೆ ಅತೀ ಕಡಿಮೆ ಅವಧಿಯಲ್ಲಿ ಬೆಳೆಯಿಟ್ಟು ಗೂಡು ಬೆಳೆಯಬಹುದು.
- ತೋಟದಲ್ಲಿನ ತಪ್ಪುಗುಳಿ ನಿವಾರಿಸಿ ಉತ್ಪಾದಕತೆ ಹೆಚ್ಚಿಸಲು ಸಸಿಗಳನ್ನು ಆಶ್ರಯಿಸಬಹುದು.
- ಸಮೃದ್ಧ ನೀರಾವರಿಯುಳ್ಳ ಒಂದು ಎಕರೆ ಜಮೀನಿನಲ್ಲಿ ಹೆಚ್ಚು ಇಳುವರಿ ಹಿಪ್ಪುನೇರಳೆ ತಳಿಯ 1,28,000 ಸಸಿಗಳನ್ನು 4 ತಿಂಗಳವರೆಗೆ ಬೆಳಸಿ ಕನಿಷ್ಠ 25 ಎಕರೆ ಹೊಸದಾಗಿ ನಾಟಿ ಮಾಡುವ ಪ್ರದೇಶಕ್ಕೆ ಒದಗಿಸಬಹುದು.
- ಒಂದು ಎಕರೆಯಲ್ಲಿ 1,28,000 ಸಸಿಗಳನ್ನು 4 ತಿಂಗಳವರೆಗೆ ಬೆಳೆಸಿರಬೇಕು.

1. ಸ್ವಂತ / ಗುತ್ತಿಗೆ ಪಡೆದ ಸಮೃದ್ಧ ನೀರಾವರಿ ಸೌಲಭ್ಯವುಳ್ಳ ಕನಿಷ್ಠ ಒಂದು ಎಕರೆ ಸಮತಟ್ಟಾದ, ಎತ್ತರಕ್ಕಿರುವ, ಫಲವತ್ತಾದ ಜಮೀನು ಉಳ್ಳವರು ಈ ಸಹಾಯ ಪಡೆಯಬಹುದು.
2. ಈ ಜಮೀನನ್ನು ಇಲಾಖೆಯ ಅಧಿಕಾರಿಗಳು ವೀಕ್ಷಿಸಿ ದೃಢೀಕರಿಸಿರಬೇಕು.
3. ಮಣ್ಣು ಪರೀಕ್ಷೆಯನ್ನು ಸರ್ಕಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮಾಡಿಸಬೇಕು.
4. ಸಸಿಗಳನ್ನು ವರ್ಷಃಪೂರ್ತಿ ಬೆಳಸಬಹುದಾಗಿದ್ದರೂ, ನಾಟಿ ಕಾಲಕ್ಕೆ 4 ತಿಂಗಳು ಮುಂಚಿತವಾಗಿ ಬೆಳೆಸುವುದು ಸೂಕ್ತ. ಅಂದರೆ ಫೆಬ್ರವರಿ–ಏಪ್ರಿಲ್ ತಿಂಗಳುಗಳಲ್ಲಿ ಬೆಳೆಸಲು ಕ್ರಮವಹಿಸುವುದು. ಜೂನ್–ಆಗಸ್ಟ್‌ಗೆ ಸಸಿಗಳನ್ನು ನಾಟಿ ಮಾಡಲು ವಿತರಿಸುವುದು.
5. ಸಸಿಗಳನ್ನು ಏರುಮಡಿಗಳಲ್ಲಿ ಅಥವಾ 23–25.ಸೆಂ.ಮಿ ಎತ್ತರ ಮತ್ತು 10–15 ಸೆಂ.ಮಿ ವ್ಯಾಸವುಳ್ಳ ಪಾಲಿಥೀನ್ ಬ್ಯಾಗ್‌ಗಳಲ್ಲಿ ಮಣ್ಣು, ಸಾವಯವ ಗೊಬ್ಬರ, ಮರಳುಗಳ ಮಿಶ್ರಣದಿಂದ ತುಂಬಿಸಿ ಬೆಳೆಸಬಹುದಾಗಿದೆ.
6. ಸುಧಾರಿತ ಹೆಚ್ಚು ಇಳುವರಿ ನೀಡುವ ಬಿತ್ತನೆ ಕಡ್ಡಿಗಳನ್ನು ಸಸಿ ಬೆಳೆಸಲು ಉಪಯೋಗಿಸಬೇಕು.
7. ಒಬ್ಬ ರೈತ ಗರಿಷ್ಠ 1.00 ಎಕರೆವರೆಗೆ ಸಸಿ ಬೆಳೆಸಿ ಸೌಲಭ್ಯ ಪಡೆಯಬಹುದಾಗಿದೆ.
8. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಕಿಸಾನ್ ನರ್ಸರಿ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
9. ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಕೆ2 ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
10. ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು / ದೃಢೀಕರಣಗಳಿರಬೇಕು.

## 2. ಹಿಪ್ಪುನೇರಳೆ ನಾಟಿ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ :

ಯಶಸ್ವಿ ಗೂಡು ಉತ್ಪಾದನೆಗೆ ಹಿಪ್ಪುನೇರಳೆ ಗುಣಮಟ್ಟ ಮುಖ್ಯವಾದ ಅಂಶ. ಈ ನಿಟ್ಟಿನಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ನೀರಾವರಿ ಸೌಲಭ್ಯವಿರುವ ರೈತರನ್ನು / ಕೃಷಿಕರನ್ನು ಆಯ್ಕೆ ಮಾಡಿ ಹಿಪ್ಪುನೇರಳೆ ನಾಟಿ ಮಾಡುವ ತೋಟ ವಿಸ್ತರಿಸುವ / ಸಾಂಪ್ರದಾಯಿಕ ಹಿಪ್ಪುನೇರಳೆ ತಳಿ ತೆಗೆದು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗೆ ಬದಲಾಯಿಸುವ ರೇಷ್ಮೆ ಕೃಷಿಕರಿಗೆ ಸಹಾಯಧನ ಒದಗಿಸಲಾಗುವುದು. ಒಬ್ಬ ಫಲಾನುಭವಿ ಗರಿಷ್ಠ 2.00 ಹೆಕ್ಟೇರ್‌ವರೆಗೆ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.



ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

CamScanner

1. ಕ್ಷೇತ್ರಮಟ್ಟದ ಅಧಿಕಾರಿ/ಸಿಬ್ಬಂದಿ ಇಂತಹ ರೈತರ ತೋಟ ಹಿಪ್ಪುನೇರಳೆ ನಾಟಿ ಪ್ರಾರಂಭದಿಂದ ಹಿಪ್ಪುನೇರಳೆ ನಾಟಿ ಕಾರ್ಯ ಪೂರೈಸುವವರೆಗೂ ನಿರಂತರವಾಗಿ ಭೇಟಿ ನೀಡಿ ತಾಂತ್ರಿಕ ಮಾಹಿತಿ ನೀಡುತ್ತಿರಬೇಕು ಹಾಗೂ ಈ ಕುರಿತು ತಮ್ಮ ದಿನಚರಿಯಲ್ಲಿ ದಾಖಲಿಸಿರಬೇಕು.
2. ಫಲಾಪೇಕ್ಷಿ ರೈತರು ರೂ.50.00ರ ಮೌಲ್ಯದ ಛಾಪಾ ಕಾಗದದಲ್ಲಿ ಕನಿಷ್ಠ 3 ವರ್ಷಗಳವರೆಗೆ ರೇಷ್ಮೆ ಕೃಷಿ ಮುಂದುವರೆಸಿಕೊಂಡು ಹೋಗುವ ಬಗ್ಗೆ ಹಾಗೂ ವಾರ್ಷಿಕ ಕನಿಷ್ಠ 2 ದ್ವಿತಳಿ ಬೆಳೆ ಮಾಡುವ ಕುರಿತು ಮುಚ್ಚಳಿಕೆಯನ್ನು ಬರೆದು ಕೊಡಬೇಕು.
3. ಸ್ವಂತ ಜಮೀನು, ನೀರಾವರಿ ಸೌಲಭ್ಯ ಹೊಂದಿದ್ದು, ಹೊಸ ಹಿಪ್ಪುನೇರಳೆ ತಳಿ ನಾಟಿ ಮಾಡುವುದು ಅವಶ್ಯ (ಪಹಣಿ ನೀಡುವುದು).
4. ನವೀಕರಿಸಿದ ರೇಷ್ಮೆ ಹುಳು ಸಾಕಾಣಿಕಾ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
5. ಹಿಪ್ಪುನೇರಳೆ ನಾಟಿ ಮಾಡಿರುವ ಬಗ್ಗೆ ಇಲಾಖಾಧಿಕಾರಿಗಳು ನಿಗಧಿತ ನಮೂನೆಯಲ್ಲಿ ಮಹಜರು ಮಾಡಿ ಸಲ್ಲಿಸುವುದು.
6. ರೇಷ್ಮೆ ಕೃಷಿಕರು ಹಿಪ್ಪುನೇರಳೆ ನಾಟಿ ಮಾಡಿರುವ ಬಗ್ಗೆ ಇಲಾಖಾಧಿಕಾರಿಗಳು ಪರಿಶೀಲಿಸಿ ಸಹಾಯಧನ ನೀಡುವಂತೆ ಶಿಫಾರಸ್ಸು ಮಾಡಬೇಕು. (ನಿಗಧಿತ ನಮೂನೆ ಲಗತ್ತಿಸಿದೆ).
7. ಸಹಾಯಧನದ ಮೊತ್ತವನ್ನು ನೇರವಾಗಿ ಫಲಾನುಭವಿ ಬ್ಯಾಂಕ್ ಖಾತೆಗೆ ಇ.ಸಿ.ಎಸ್. ಮುಖಾಂತರ ಪಾವತಿಸುವುದು ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಸಂಬಂಧಿಸಿದ ಬ್ಯಾಂಕ್‌ಗೆ ಕಳುಹಿಸುವುದು.
8. ರೇಷ್ಮೆ ಕೃಷಿಕರು ನಿಗಧಿತ ನಮೂನೆಯಲ್ಲಿ ತಮ್ಮ ವ್ಯಾಪ್ತಿಗೆ ಬರುವ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸಹಾಯಧನ ಪಡೆಯುವುದು.
9. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಹಿಪ್ಪುನೇರಳೆ ತೋಟದಲ್ಲಿ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
10. ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು / ದೃಢೀಕರಣಗಳಿರಬೇಕು.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನಾಟಿ (ಎಕರೆ) | 0.50 | 0.375(75%) | 0.45(90%) |

3. **ರೋಗ ನಿಯಂತ್ರಣ ಕಾರ್ಯಕ್ರಮ :**

ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಗಳ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳು, ರೋಗ ನಿರೋಧಕಗಳು ಹಾಗೂ ಕೀಟ ನಾಶಕಗಳನ್ನು ವ್ಯವಸ್ಥೆಗೊಳಿಸಿಕೊಳ್ಳಬೇಕು. ದ್ವಿತಳಿ ಸಂಕರಣ ತಳಿ, ಶುದ್ಧ ದ್ವಿತಳಿ, ಮೈಸೂರು ತಳಿಗೆ ಆದ್ಯತೆ ಮೇರೆಗೆ ಉಪಯೋಗಿಸಿಕೊಳ್ಳುವುದು. ರೇಷ್ಮೆ ನಿರ್ದೇಶನಾಲಯವು ಎಂಪ್ಯಾನಲ್ ಮಾಡಿರುವ ಸಂಸ್ಥೆಗಳಿಂದ ಮಾತ್ರ ನಿಗಧಿಸಿರುವ ಎಲ್1 ದರಗಳ ಅನ್ವಯ ಅವಶ್ಯವಿರುವ ಸಿಂಪರಕಗಳನ್ನು ಪಡೆದು ನಿರ್ವಹಣೆ ಮಾಡಲು ಅನುದಾನ ಒದಗಿಸಿಕೊಳ್ಳುವುದು.



ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

CamScanner

4. **ರೇಷ್ಮೆ ವಸ್ತು ಪ್ರದರ್ಶನ / ಕಾರ್ಯಗಾರ:**

ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ / ಕಾರ್ಯಗಾರ /ವಿಚಾರ ಸಂಕೀರ್ಣಗಳಿಗಾಗಿ ರೂ.1.00 ಲಕ್ಷಕ್ಕೆ ಮಾತ್ರ ನಿಗದಿ ಪಡಿಸಿದೆ.

ರೈತರನ್ನು ರೇಷ್ಮೆ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಮೂಡಿಸಲು ಅಧ್ಯಯನ ಪ್ರವಾಸ ಕೈಗೊಳ್ಳಲು ಅಗತ್ಯಕ್ಕೆ ತಕ್ಕಂತೆ ರೂ.1.00 ಲಕ್ಷದವರೆಗೆ ಅವಕಾಶ ಕಲ್ಪಿಸಿಕೊಳ್ಳುವುದು.

- ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಇಲಾಖಾ ವಸ್ತು ಪ್ರದರ್ಶನಕ್ಕಾಗಿ ನಿಗದಿಪಡಿಸಿದ ಆರ್ಥಿಕ ವಂಟನೆ ರೂ.5.00 ಲಕ್ಷ
- ತುಮಕೂರಿನ ಸಿದ್ದಗಂಗಾ ಜಾತ್ರೆಗೆ ರೂ.1.25 ಲಕ್ಷ
- ಸಿದ್ದರ ಬೆಟ್ಟದ/ ಮಧುಗಿರಿ ಜಾತ್ರೆಗೆ ತಲಾ ರೂ.50,000/-
- ಇತರೆ ಜಿಲ್ಲಾ ಉತ್ಸವಗಳು. ರೂ. 75,000/-

## II. <u>ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು – 2851-00-104-0-61</u>

**ತಾಂತ್ರಿಕ ಸಲಹೆಗಳು ಪ್ರದರ್ಶನಗಳು, ಪ್ರಚಾರ ಶ್ರವಣ ಮತ್ತು ದೃಶ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳು:**

ಅ. **ಕ್ಷೇತ್ರೋತ್ಸವಗಳು:** ಹಿಪ್ಪುನೇರಳೆ ತೋಟ ನಿರ್ವಹಣೆ ಹಾಗೂ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಉತ್ತಮ ಗೂಡು ಇಳುವರಿ ಹಾಗೂ ಹೆಚ್ಚಿನ ಆದಾಯ ಪಡೆಯುತ್ತಿರುವ ರೇಷ್ಮೆ ಕೃಷಿಕರ ಅನುಭವಗಳನ್ನು ಇತರೆ ಕೃಷಿಕರು ಹಾಗೂ ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ಕೃಷಿಕರು/ನೂಲು ಬಿಚ್ಚಾಣಿಕೆದಾರರು ತಿಳಿದುಕೊಳ್ಳಲು ಕ್ಷೇತ್ರೋತ್ಸವ ಆಚರಿಸುವುದು. ಈ ಕ್ಷೇತ್ರೋತ್ಸವದಲ್ಲಿ ರೇಷ್ಮೆ ಉಪನಿರ್ದೇಶಕರು ಕಡ್ಡಾಯವಾಗಿ ಭಾಗವಹಿಸಬೇಕು, ಪ್ರತಿ ಕ್ಷೇತ್ರೋತ್ಸವದ ವ್ಯವಸ್ಥೆಗಾಗಿ ನಿಗದಿಪಡಿಸಿದ ಆರ್ಥಿಕ ವಂಟನೆ ಗರಿಷ್ಠ ರೂ.5000/-ಮಾತ್ರ ಒದಗಿಸಿಕೊಳ್ಳುವುದು.

ಆ. **ರೇಷ್ಮೆ ವಸ್ತು ಪ್ರದರ್ಶನ / ಕಾರ್ಯಾಗಾರ :** ತಾಲ್ಲೂಕು ಮಟ್ಟದ ವಸ್ತು ಪ್ರದರ್ಶನ / ಕಾರ್ಯಾಗಾರ / ವಿಚಾರ ಸಂಕಿರಣಗಳಿಗಾಗಿ ರೂ.25,000/-ಮಾತ್ರ ಒದಗಿಸಿಕೊಳ್ಳುವುದು.

ಇ. ಹೊಸ ತಾಂತ್ರಿಕತೆಗಳ ಬಗ್ಗೆ ಅವಶ್ಯಕತೆಗೆ ತಕ್ಕಂತೆ ಕರಪತ್ರ, ಇಲಾಖೆಯ ರೇಷ್ಮೆ ಕೃಷಿ ಸಂಚಿಕೆ ಖರೀದಿಗೆ ಸಂಸ್ಥೆಗಳ ಅಜೀವ ಸದಸ್ಯತ್ವ ಮಾಡಿರುವುದು, ಕೈಪಿಡಿಗಳನ್ನು ಮುದ್ರಿಸಿ ರೇಷ್ಮೆ ಕೃಷಿಕರಿಗೆ ಸಕಾಲದಲ್ಲಿ ಜಿಲ್ಲೆಗಳಿಗೆ ಒದಗಿಸಲು ರೂ.25,000/-ವರೆಗೆ ವಂಟನೆ ನಿಗದಿಪಡಿಸಿಕೊಳ್ಳುವುದು.

ಈ. ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರುಗಳಿಗೆ ತಾಂತ್ರಿಕತೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಇದಕ್ಕಾಗಿ ಪ್ರದರ್ಶನ ಫಲಕಗಳನ್ನು ಕ್ಷೇತ್ರಮಟ್ಟದಲ್ಲಿ ಎಲ್ಲಾ ಸಂಸ್ಥೆಗಳಲ್ಲಿ ಅದರಲ್ಲೂ ರೈತರು/ರೀಲರುಗಳು ಭೇಟಿ ನೀಡುವ ಪ್ರಾಥಮಿಕ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ರೈತ ಸಂಪರ್ಕ



ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟೆ

CamScanner

ಇ. ಹೊಸ ತಾಂತ್ರಿಕತೆಗಳ ಬಗ್ಗೆ ಅವಶ್ಯಕತೆಗೆ ತಕ್ಕಂತೆ ಕರಪತ್ರ, ಇಲಾಖೆಯ ರೇಷ್ಮೆ ಕೃಷಿ ಸಂಚಿಕೆ ಖರೀದಿಗೆ ಸಂಸ್ಥೆಗಳ ಅಜೀವ ಸದಸ್ಯತ್ವ ಮಾಡಿರುವುದು, ಕೈಪಿಡಿಗಳನ್ನು ಮುದ್ರಿಸಿ ರೇಷ್ಮೆ ಕೃಷಿಕರಿಗೆ ಸಕಾಲದಲ್ಲಿ ಜಿಲ್ಲೆಗಳಿಗೆ ಒದಗಿಸಲು ರೂ.25,000/-ವರೆಗೆ ವಂಟನೆ ನಿಗದಿಪಡಿಸಿಕೊಳ್ಳುವುದು.

ಈ. ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರುಗಳಿಗೆ ತಾಂತ್ರಿಕತೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಇದಕ್ಕಾಗಿ ಪ್ರದರ್ಶನ ಫಲಕಗಳನ್ನು ಕ್ಷೇತ್ರಮಟ್ಟದಲ್ಲಿ ಎಲ್ಲಾ ಸಂಸ್ಥೆಗಳಲ್ಲಿ ಅದರಲ್ಲೂ ರೈತರು/ರೀಲರುಗಳು ಭೇಟಿ ನೀಡುವ ಪ್ರಾಥಮಿಕ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಪ್ರದರ್ಶಿಸಿದಲ್ಲಿ ಅವರ ತಾಂತ್ರಿಕ ಅರಿವು ಹೆಚ್ಚಾಗುತ್ತದೆ. ಇದಕ್ಕಾಗಿ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಪಾರದರ್ಶಿಕೆಗಳನ್ನು, ಪ್ರದರ್ಶನ ಚಿತ್ರಗಳನ್ನು ಅಳವಡಿಸಲು ರೂ.25,000/-ವಂಟನೆಯನ್ನು ಒದಗಿಸಿ ಕೊಳ್ಳಬಹುದು.

ಉ. ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ: ರಾಜ್ಯದ 18 ಜಿಲ್ಲೆಗಳಲ್ಲಿ ಆಯ್ದ ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ಮಹಿಳೆಯರ ಸೌಲಭ್ಯಕ್ಕಾಗಿ ಪ್ರತ್ಯೇಕ ಪ್ರಾತ್ಯಕ್ಷತಾ ಕ್ಷೇತ್ರವನ್ನು ಸ್ಥಾಪಿಸಿದೆ. ಇಲ್ಲಿ ಒಂದು ಎಕರೆ ಹಿಪ್ಪುನೇರಳೆ ತೋಟ ನಿರ್ವಹಣೆ ಹಾಗೂ ಹುಳು ಸಾಕಾಣಿಕೆ ಮಾಡುವುದು ಹಾಗೂ ವಸತಿ ಕೇಂದ್ರದ ನಿರ್ವಹಣೆ ಮಾಡಲು ಅಗತ್ಯ ಆಯವ್ಯಯಗಳನ್ನು ಒದಗಿಸಿಕೊಳ್ಳಬಹುದು. ಜಿಲ್ಲಾ/ತಾಲ್ಲೂಕು ಪಂಚಾಯತ್ ಯೋಜನೆಗಳಡಿ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆಯಡಿ ಅನುದಾನ ಒದಗಿಸಿದಲ್ಲಿ ಹಿಪ್ಪುನೇರಳೆ ನಾಟಿ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಕ್ರಮವಹಿಸುವುದು.

## III. <u>ಜಿಲ್ಲಾ ವಲಯ ಯೋಜನೇತರ ಕಾರ್ಯಕ್ರಮ:</u>

ಪ್ರತಿಯೊಂದು ಜಿಲ್ಲೆಯಲ್ಲಿ ಲೆಕ್ಕ ಶೀರ್ಷಿಕೆ 2851-00-107-0-26(ಯೋಜನೇತರ) ಮತ್ತು 2851-00-107-0-28(ಯೋಜನೇತರ) ಅಡಿ ಆಯಾಯ ಜಿಲ್ಲೆಗಳಲ್ಲಿರುವ ಸಿಬ್ಬಂದಿ ಹಾಗೂ ಸಂಸ್ಥೆಗಳ ನಿರ್ವಹಣೆ ವೆಚ್ಚಕ್ಕಾಗಿ ವಂಟನೆಯನ್ನು ಒದಗಿಸಿಕೊಳ್ಳುವುದು.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

1. ಜಿಲ್ಲಾ ಪಂಚಾಯತ್ ಎಲ್ಲಾ ರೇಷ್ಮೆ ಕೃಷಿ ಉಪನಿರ್ದೇಶಕರುಗಳಿಗೆ.
2. ಎಲ್ಲಾ ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರುಗಳಿಗೆ.
3. ಪ್ರತಿಯನ್ನು ಅಭಿನಂದನೆಗಳೊಂದಿಗೆ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು(ಜಿಲ್ಲಾ ಪಂಚಾಯತ್) ಇವರ ಮಾಹಿತಿಗಾಗಿ ಕಳುಹಿಸಿದೆ.
4. ಪ್ರತಿಯನ್ನು ಅಭಿನಂದನೆಗಳೊಂದಿಗೆ ನಿರ್ದೇಶಕರು, ಯೋಜನಾ ಇಲಾಖೆ, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.



ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟೆ

CamScanner

-23ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮಾರ್ಚ್-2023ರ ಅಂತ್ಯದವರೆಗೆ ಆದ ವೆಚ್ಚದ ಪ್ರಗತಿ ವ

| ಕ್ರ.ಸಂ | ಕಾರ್ಯಕ್ರಮ | ವಾರ್ಷಿಕ ಗುರಿ | | ಮಾಸಾಂತ್ಯ ಬಿಡುಗಡೆ ಅನುದಾನ | ಮಾಸಾಂತ್ಯ ಸಾಧನೆ | |
|---|---|---|---|---|---|---|
| | | ಭೌತಿಕ | ಆರ್ಥಿಕ | | ಭೌತಿಕ | ಆರ್ಥಿಕ |
| I | ರೇಷ್ಮೆ ಅಭಿವೃದ್ಧಿ ಯೋಜನೆ – ಸಾಮಾನ್ಯ 2851-00-107-1-35-(106) | | | | | |
| 1 | 1000 ಚದರಡಿ ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 2 | 600 ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 3 | 225 ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 4 | ಕಡಿಮೆ ವೆಚ್ಚ ಶೆಡ್ | 70 | 70.00000 | 65.00000 | 81 | 64.90000 |
| | ರೇ. ಹು. ಸಾಕಾಣಿಕೆ ಮನೆ ಒಟ್ಟು | 70 | 70.00000 | 65.00000 | 81 | 64.90000 |
| 5 | ಸಲಕರಣೆ | 0 | 0.00000 | 0.00000 | 0 | 0.00000 |
| 6 | ದ್ವಿತಳಿ ಚಾಕಿ ವೆಚ್ಚ | 4.34 | 43.40000 | 16.32500 | 1.25820 | 12.58170 |
| 7 | ದ್ವಿತಳಿ ರೇಷ್ಮೆ ಗೂಡಿನ ಸಾಗಾಣಿಕಾ ವೆಚ್ಚ | 0.6594 | 6.59400 | 9.64000 | 1.34790 | 13.47827 |
| 8 | ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸಹಾಯಧನ | 0 | 0.00000 | 0.00000 | 0 | 0.00000 |
| | ಒಟ್ಟು | 74.9994 | 119.99400 | 90.96500 | 83.60610 | 90.95997 |
| II | ಕೇಂದ್ರ ಪುರಸ್ಕೃತ ಸಿಲ್ಕ ಸಮಗ್ರ ಯೋಜನೆ-ಸಾಮಾನ್ಯ 2851-00-107-1-35-(106) | | | | | |
| 1 | 1000 ಚದರಡಿ ರೇ. ಹು. ಸಾಕಾಣಿಕೆ ಮನೆ | | | | | |
| | ರಾಜ್ಯದ ಪಾಲು (25%) | 13 | 13.00000 | 13.00000 | 13 | 13.00000 |
| | ಕೇಂದ್ರದ ಪಾಲು (50%) | 13 | 26.00000 | 26.00000 | 13 | 26.00000 |
| | ಒಟ್ಟು | 13 | 39.00000 | 39.00000 | 13 | 39.00000 |
| 2 | 600 ರೇ. ಹು. ಸಾಕಾಣಿಕೆ ಮನೆ | | | | | |
| | ರಾಜ್ಯದ ಪಾಲು (25%) | 6 | 4.50000 | 4.50000 | 6 | 4.50000 |
| | ಕೇಂದ್ರದ ಪಾಲು (50%) | 6 | 9.00000 | 9.00000 | 6 | 9.00000 |
| | ಒಟ್ಟು | 6 | 13.50000 | 13.50000 | 6 | 13.50000 |
| | ರೇ. ಹು. ಸಾಕಾಣಿಕೆ ಮನೆ ಒಟ್ಟು | 19 | 52.50000 | 52.50000 | 19 | 52.50000 |
| 3 | ಸಲಕರಣೆ | | | | | |
| | ರಾಜ್ಯದ ಪಾಲು (25%) | 137.5 | 25.78125 | 25.78125 | 137.5 | 25.78640 |
| | ಕೇಂದ್ರದ ಪಾಲು (50%) | 137.5 | 51.56250 | 51.56250 | 137.5 | 51.59250 |
| | ಒಟ್ಟು | 137.5 | 77.34375 | 77.34375 | 137.5 | 77.37890 |
| 4 | ಸೋಂಕು ನಿವಾರಕ | | | | | |
| | ರಾಜ್ಯದ ಪಾಲು (25%) | 100 | 1.25000 | 1.25000 | 100 | 1.24988 |
| | ಕೇಂದ್ರದ ಪಾಲು (50%) | 100 | 2.50000 | 2.50000 | 100 | 2.49977 |
| | ಒಟ್ಟು | 100 | 3.75000 | 3.75000 | 100 | 3.74965 |
| | ಒಟ್ಟು ರಾಜ್ಯದ ಪಾಲು (25%) | 256.5 | 44.53125 | 44.53125 | 256.5 | 44.53628 |
| | ಒಟ್ಟು ಕೇಂದ್ರದ ಪಾಲು (50%) | 256.5 | 89.06250 | 89.06250 | 256.5 | 89.09227 |
| | ಒಟ್ಟು | 257 | 133.59375 | 133.59375 | 257 | 133.62855 |
| III | ರೇಷ್ಮೆ ಅಭಿವೃದ್ಧಿ ಯೋಜನೆ- ವಿಶೇಷ ಘಟಕ ಯೋಜನೆ – 2851-00-107-1-35 (422) | | | | | |
| 1 | 1000 ಚದರಡಿ ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 2 | 600 ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 3 | 225 ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 4 | ಕಡಿಮೆ ವೆಚ್ಚ ಶೆಡ್ | 5 | 6.00000 | 3.36000 | 4 | 3.36000 |
| | ರೇ. ಹು. ಸಾಕಾಣಿಕೆ ಮನೆ ಒಟ್ಟು | 5 | 6.00000 | 3.36000 | 4 | 3.36000 |
| 5 | ಸಲಕರಣೆ | 5 | 3.37500 | 0.00000 | 0 | 0.00000 |
| 6 | ಮೌಂಟಿಂಗ ಹಾಲ್ | 0 | 0.00000 | 0.00000 | 0 | 0.00000 |
| 7 | ಸೋಂಕು ನಿವಾರಕ | 0 | 0.00000 | 0.00000 | 0 | 0.00000 |
| 8 | ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸಹಾಯಧನ | 0 | 0.00000 | 0.00000 | 0 | 0.00000 |
| | ಒಟ್ಟು | 10 | 9.37500 | 3.36000 | 4 | 3.36000 |

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

CamScanner

-23ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮಾರ್ಚ್-2023ರ ಅಂತ್ಯದವರೆಗೆ ಆದ ವೆಚ್ಚದ ಪ್ರಗ

| ಕ್ರ.ಸಂ | ಕಾರ್ಯಕ್ರಮ | ವಾರ್ಷಿಕ ಗುರಿ | | ಮಾಸಾಂತ್ಯ ಬಿಡುಗಡೆ ಅನುದಾನ | ಮಾಸಾಂತ್ಯ ಸಾಧನೆ | |
|---|---|---|---|---|---|---|
| | | ಭೌತಿಕ | ಆರ್ಥಿಕ | | ಭೌತಿಕ | ಆರ್ಥಿಕ |
| IV | ಕೇಂದ್ರ ಪುರಸ್ಕೃತ ಸಿಲ್ಕ ಸಮಗ್ರ ಯೋಜನೆ-ವಿಶೇಷ ಘಟಕ ಯೋಜನೆ 2851-00-107-1-35-(422) | | | | | |
| 1 | 1000 ಚದರಡಿ ರೇ. ಹು. ಸಾಕಾಣಿಕೆ ಮನೆ | | | | | |
| | ರಾಜ್ಯದ ಪಾಲು (25%) | 1 | 1.00000 | 1.00000 | 1 | 1.00000 |
| | ಕೇಂದ್ರದ ಪಾಲು (65%) | 1 | 2.60000 | 2.60000 | 1 | 2.60000 |
| | ಒಟ್ಟು | 1 | 3.60000 | 3.60000 | 1 | 3.60000 |
| 2 | 600 ರೇ. ಹು. ಸಾಕಾಣಿಕೆ ಮನೆ | | | | | |
| | ರಾಜ್ಯದ ಪಾಲು (25%) | 2 | 1.50000 | 1.50000 | 2 | 1.50000 |
| | ಕೇಂದ್ರದ ಪಾಲು (65%) | 2 | 3.90000 | 3.90000 | 2 | 3.90000 |
| | ಒಟ್ಟು | 2 | 5.40000 | 5.40000 | 2 | 5.40000 |
| | ರೇ. ಹು. ಸಾಕಾಣಿಕೆ ಮನೆ ಒಟ್ಟು | 3 | 9.00000 | 9.00000 | 3 | 9.00000 |
| 3 | ಸಲಕರಣೆ | | | | | |
| | ರಾಜ್ಯದ ಪಾಲು (25%) | 11.5 | 2.15625 | 2.15625 | 11.5 | 2.14125 |
| | ಕೇಂದ್ರದ ಪಾಲು (65%) | 11.5 | 5.60625 | 5.60625 | 11.5 | 5.56725 |
| | ಒಟ್ಟು | 11.5 | 7.76250 | 7.76250 | 11.5 | 7.70850 |
| 4 | ಸೋಂಕು ನಿವಾರಕ | | | | | |
| | ರಾಜ್ಯದ ಪಾಲು (25%) | 0 | 0.00000 | 0.00000 | 0 | 0.00000 |
| | ಕೇಂದ್ರದ ಪಾಲು (65%) | 0 | 0.00000 | 0.00000 | 0 | 0.00000 |
| | ಒಟ್ಟು | 0 | 0.00000 | 0.00000 | 0 | 0.00000 |
| | ಒಟ್ಟು ರಾಜ್ಯದ ಪಾಲು (25%) | 14.5 | 4.65625 | 4.65625 | 14.5 | 4.64125 |
| | ಒಟ್ಟು ಕೇಂದ್ರದ ಪಾಲು (65%) | 14.5 | 12.10625 | 12.10625 | 14.5 | 12.06725 |
| | ಒಟ್ಟು | 14.5 | 16.76250 | 16.76250 | 14.5 | 16.70850 |
| V | ರೇಷ್ಮೆ ಅಭಿವೃದ್ಧಿ ಯೋಜನೆ -ಗಿರಿಜನ ಉಪಯೋಜನೆ- 2851-00-107-1-35 (423) | | | | | |
| 1 | 1000 ಚದರಡಿ ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 2 | 600 ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 3 | 225 ರೇ. ಹು. ಸಾಕಾಣಿಕೆ ಮನೆ | 0 | 0.00000 | 0.00000 | 0 | 0.00000 |
| 4 | ಕಡಿಮೆ ವೆಚ್ಚ ಶೆಡ್ | 5 | 6.00000 | 2.40000 | 3 | 2.40000 |
| | ರೇ. ಹು. ಸಾಕಾಣಿಕೆ ಮನೆ ಒಟ್ಟು | 5 | 6.00000 | 2.40000 | 3 | 2.40000 |
| 5 | ಸಲಕರಣೆ | 0 | 0.00000 | 0.00000 | 0 | 0.00000 |
| 6 | ಮೌಂಟಿಂಗ ಹಾಲ್ | 0 | 0.00000 | 0.00000 | 0 | 0.00000 |
| 7 | ಸೋಂಕು ನಿವಾರಕ | 0 | 0.00000 | 0.00000 | 0 | 0.00000 |
| 8 | ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸಹಾಯಧನ | 0 | 0.00000 | 0.00000 | 0 | 0.00000 |
| | ಒಟ್ಟು | 5 | 6.00000 | 2.40000 | 3 | 2.40000 |
| VI | ಕೇಂದ್ರ ಪುರಸ್ಕೃತ ಸಿಲ್ಕ ಸಮಗ್ರ ಯೋಜನೆ- ಗಿರಿಜನ ಉಪಯೋಜನೆ 2851-00-107-1-35-(423) | | | | | |
| 1 | 1000 ಚದರಡಿ ರೇ. ಹು. ಸಾಕಾಣಿಕೆ ಮನೆ | | | | | |
| | ರಾಜ್ಯದ ಪಾಲು (25%) | 2 | 2.00000 | 2.00000 | 2 | 2.00000 |
| | ಕೇಂದ್ರದ ಪಾಲು (65%) | 2 | 5.20000 | 5.20000 | 2 | 5.20000 |
| | ಒಟ್ಟು | 2 | 7.20000 | 7.20000 | 2 | 7.20000 |
| 2 | 600 ರೇ. ಹು. ಸಾಕಾಣಿಕೆ ಮನೆ | | | | | |
| | ರಾಜ್ಯದ ಪಾಲು (25%) | 1 | 0.75000 | 0.75000 | 1 | 0.75000 |
| | ಕೇಂದ್ರದ ಪಾಲು (65%) | 1 | 1.95000 | 1.95000 | 1 | 1.95000 |
| | ಒಟ್ಟು | 1 | 2.70000 | 2.70000 | 1 | 2.70000 |
| | ರೇ. ಹು. ಸಾಕಾಣಿಕೆ ಮನೆ ಒಟ್ಟು | 3 | 9.90000 | 9.90000 | 3 | 9.90000 |
| 3 | ಸಲಕರಣೆ | | | | | |
| | ರಾಜ್ಯದ ಪಾಲು (25%) | 10 | 1.87500 | 1.87500 | 10 | 1.87500 |
| | ಕೇಂದ್ರದ ಪಾಲು (65%) | 10 | 4.87500 | 4.87500 | 10 | 4.91465 |
| | ಒಟ್ಟು | 10 | 6.75000 | 6.75000 | 10 | 6.78965 |
| 4 | ಸೋಂಕು ನಿವಾರಕ | | | | | |
| | ರಾಜ್ಯದ ಪಾಲು (25%) | 0 | 0.00000 | 0.00000 | 0 | 0.00000 |
| | ಕೇಂದ್ರದ ಪಾಲು (65%) | 0 | 0.00000 | 0.00000 | 0 | 0.00000 |
| | ಒಟ್ಟು | 0 | 0.00000 | 0.00000 | 0 | 0.00000 |
| | ಒಟ್ಟು ರಾಜ್ಯದ ಪಾಲು (25%) | 13 | 4.62500 | 4.62500 | 13 | 4.62500 |
| | ಒಟ್ಟು ಕೇಂದ್ರದ ಪಾಲು (65%) | 13 | 12.02500 | 12.02500 | 13 | 12.06465 |
| | ಒಟ್ಟು | 13 | 16.65000 | 16.65000 | [illegible] | [illegible]965 |

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

CamScanner

-23ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮಾರ್ಚ-2023ರ ಅಂತ್ಯದವರೆಗೆ ಆದ ವೆಚ್ಚದ ಪ್ರಗತಿ ವ

| ಕ್ರ.ಸಂ | ಕಾರ್ಯಕ್ರಮ | ವಾರ್ಷಿಕ ಗುರಿ | | ಮಾಸಾಂತ್ಯ ಬಿಡುಗಡೆ ಅನುದಾನ | ಮಾಸಾಂತ್ಯ ಸಾಧನೆ | |
|---|---|---|---|---|---|---|
| | | ಭೌತಿಕ | ಆರ್ಥಿಕ | | ಭೌತಿಕ | ಆರ್ಥಿಕ |
| VII | ರೇಷ್ಮೆ ಅಭಿವೃದ್ಧಿ ಯೋಜನೆ – 2851-00-107-1-35 (015) | | | | | |
| 1 | ರೇಷ್ಮೆ ವಿಸ್ತರಣಾ ಕಾರ್ಯಕರ್ತರ ಗೌರವಧನ | 0 | 3.02998 | 3.02998 | 0 | 3.02172 |
| | ಒಟ್ಟು | 0 | 3.02998 | 3.02998 | 0 | 3.02172 |
| VIII | ರೇಷ್ಮೆ ಅಭಿವೃದ್ಧಿ ಯೋಜನೆ – 2851-00-107-1-35 (059) | | | | | |
| 1 | ರೇಷ್ಮೆ ಕೃಷಿ ಕ್ಷೇತ್ರ | 0 | 2.45000 | 2.45000 | 0 | 2.44975 |
| 2 | ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮ-ಕ್ಲಸ್ಟರ್ | 1 | 0.07500 | 0.07500 | 0 | 0.07500 |
| | ಒಟ್ಟು | 1 | 2.52500 | 2.52500 | 0 | 2.52475 |
| IX | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ) – ಸಾಮಾನ್ಯ : 2401-00-108-2-30 (106) | | | | | |
| 1 | ಸಾಮಾನ್ಯ ವರ್ಗದ ರೈತರು ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾರಿ ಘಟಕಗಳ ಸಹಾಯಧನ | 24.00 | 16.10700 | 16.10700 | 23.30 | 15.80772 |
| 2 | ಚಾರ್ಟೆಡ್ ಅಂಕೌಂಟಂಟ್ ಲೆಕ್ಕ ಪರಿಶೋಧನೆ ವೆಚ್ಚ | 0.00 | 0.00000 | 0.00000 | 0.00 | 0.09440 |
| | ಒಟ್ಟು | 24.00 | 16.10700 | 16.10700 | 23.30 | 15.90212 |
| IX | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ) – ವಿಶೇಷ ಘಟಕ ಯೋಜನೆ : 2401-00-108-2-30 (422) | | | | | |
| 1 | ಪರಿಶಿಷ್ಟ ಜಾತಿ ವರ್ಗದ ರೈತರು ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾರಿ ಘಟಕಗಳ ಸಹಾಯಧನ | 1.00 | 1.00000 | 1.00000 | 0.80 | 0.91800 |
| | ಒಟ್ಟು | 1.00 | 1.00000 | 1.00000 | 0.80 | 0.91800 |
| IX | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ) – ಗಿರಿಜನ ಉಪಯೋಜನೆ : 2401-00-108-2-30 (423) | | | | | |
| 1 | ಪರಿಶಿಷ್ಟ ಪಂಗಡ ವರ್ಗದ ರೈತರು ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾರಿ ಘಟಕಗಳ ಸಹಾಯಧನ | 1.60 | 1.65000 | 1.65000 | 1.60 | 1.28923 |
| | ಒಟ್ಟು | 1.60 | 1.65000 | 1.65000 | 1.60 | 1.28923 |
| X | ಬೆಲೆ ಸ್ಥಿರೀಕರಣ ನಿಧಿ ಅನುಧಾನದಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಯೋಜನೆ 2851-00-107-1-51 (106) | | | | | |
| 1 | ಮಾರುಕಟ್ಟೆಯಲ್ಲಿ ಮಾರಾಟವಾದ ದ್ವಿತಳಿ ರೇಷ್ಮೆ ಗೂಡಿಗೆ ರೂ.10/- | 0.5 | 5.00000 | *5.00000* | 0.49971 | 4.99932 |
| 2 | ಮಿಶ್ರ ತಳಿ ಗೂಡಿಗೆ ರೂ.30/- | 0.000 | 0.00000 | 0.00000 | 0.00 | 0.00000 |
| 3 | ದ್ವಿತಳಿ ಗೂಡಿಗೆ ರೂ.50/- | 0.000 | 0.00000 | | 0.00 | 0.00000 |
| | ಒಟ್ಟು | **0.500** | **5.00000** | **5.00000** | **0.49971** | **4.99932** |
| 3 | ಮಹಿಳೆಯರಿಗೆ ಹಾಗೂ ಮಹಿಳಾ ರೇಷ್ಮೆ ಸಹಕಾರ ಸಂಘಗಳ ಮತ್ತು ಗುಣಾತ್ಮಕ ಸಂಘಗಳ ಸದಸ್ಯರಿಗೆ ತರಬೇತಿ | 0 | 0.00000 | 0.00000 | 0 | 0.00000 |
| 4 | ರಕ್ಷಣಾತ್ಮಕ ಧರ | 0 | 0.00000 | 0.00000 | 0 | 0.00000 |
| | ಒಟ್ಟು | 0.5 | 5.00000 | 5.00000 | 0.49971 | 4.99932 |
| XI | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : 2401-00-800-1-57 (106) | | | | | |
| 1 | ಟ್ರಂಚಿಂಗ್ ಮಲ್ಚಿಂಗ್ ಕಾರ್ಯಕ್ರಮ | 9 | 1.35000 | 1.35000 | 9 | 1.35000 |
| 2 | ಮಣ್ಣಿನ ಫಲವತ್ತತೆಗೆ | 12 | 1.05756 | 1.05756 | 12 | 1.05756 |
| | ಒಟ್ಟು | **21** | **2.40756** | **2.40756** | **21** | **2.40756** |
| XII | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : 2401-00-800-1-57 (422) | | | | | |
| 1 | ಟ್ರಂಚಿಂಗ್ ಮಲ್ಚಿಂಗ್ ಕಾರ್ಯಕ್ರಮ | 3 | 0.45000 | 0.45000 | 3 | 0.45000 |
| 2 | ಮಣ್ಣಿನ ಫಲವತ್ತತೆಗೆ | 5 | 0.44065 | 0.44065 | 5 | 0.44065 |
| | ಒಟ್ಟು | **8** | **0.89065** | **0.89065** | **8** | **0.89065** |
| XIII | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : 2401-00-800-1-57 (423) | | | | | |
| 1 | ಟ್ರಂಚಿಂಗ್ ಮಲ್ಚಿಂಗ್ ಕಾರ್ಯಕ್ರಮ | 0 | 0.00000 | 0.00000 | 0 | 0.00000 |
| 2 | ಮಣ್ಣಿನ ಫಲವತ್ತತೆಗೆ | 2 | 0.17626 | 0.17626 | 2 | 0.17626 |
| | ಒಟ್ಟು | **2** | **0.17626** | **0.17626** | **2** | **0.17626** |

ರೇಷ್ಮೆ ಉಪನಿರ್ದೇಶಕರು
ಜಿ. ಪಂ. ಬಾಗಲಕೋಟ

CS CamScanner

-23ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮಾರ್ಚ್-2023ರ ಅಂತ್ಯದವರೆಗೆ ಆದ ವೆಚ್ಚದ ಪ್ರಗತಿ ವ

| ಕ್ರ.ಸಂ | ಕಾರ್ಯಕ್ರಮ | ವಾರ್ಷಿಕ ಗುರಿ | | ಮಾಸಾಂತ್ಯ ಬಿಡುಗಡೆ ಅನುದಾನ | ಮಾಸಾಂತ್ಯ ಸಾಧನೆ | |
|---|---|---|---|---|---|---|
| | | ಭೌತಿಕ | ಆರ್ಥಿಕ | | ಭೌತಿಕ | ಆರ್ಥಿಕ |
| **XIV** | **ರೇಷ್ಮೆ ಬೆಳೆಗಾರರಿಗೆ ಸಹಾಯ-ಸಾಮಾನ್ಯ 2851-00-104-0-30-(100)** | | | | | |
| 1 | ಹಿಪ್ಪುನೇರಳೆ ನರ್ಸರಿಗೆ ಸಹಾಯಧನ | 2.00 | 2.25000 | 2.25000 | 2.20 | 2.81250 |
| 2 | ಹಿಪ್ಪುನೇರಳೆ ನಾಟಿಗೆ ಸಹಾಯಧನ | 80.00 | 30.00000 | 30.00000 | 80.00 | 30.00000 |
| 3 | ಅಧ್ಯಯನ ಪ್ರವಾಸ | 1.00 | 1.00000 | 1.00000 | 1.00 | 1.00000 |
| 4 | ವಸ್ತು ಪ್ರದರ್ಶನ | 1.00 | 0.50000 | 0.50000 | 0.00 | 0.00000 |
| 5 | ರೇಷ್ಮೆ ಹುಳು ಸಾಕಾಣಿಕೆ ಸೋಂಕು ನಿವಾರಕಗಳ ಖರೀದಿ | 0.00 | 35.83000 | 35.83000 | 0.00 | 35.76334 |
| | **ಒಟ್ಟು** | **84** | **69.58000** | **69.58000** | **83.2** | **69.57584** |
| **XV** | **ರೇಷ್ಮೆ ಬೆಳೆಗಾರರಿಗೆ ಸಹಾಯ-ವಿಶೇಷ ಘಟಕ ಯೋಜನೆ 2851-00-104-0-30-(422)** | | | | | |
| 1 | ಹಿಪ್ಪುನೇರಳೆ ನರ್ಸರಿಗೆ ಸಹಾಯಧನ | 1 | 1.35000 | 1.35000 | 1.00 | 0.67500 |
| 2 | ಹಿಪ್ಪುನೇರಳೆ ನಾಟಿಗೆ ಸಹಾಯಧನ | 12 | 5.40000 | 5.40000 | 15.00 | 6.75000 |
| 3 | ರೇಷ್ಮೆ ಹುಳು ಸಾಕಾಣಿಕೆ ಸೋಂಕು ನಿವಾರಕಗಳ ಖರೀದಿ | 0 | 10.03000 | 10.03000 | 0.00 | 9.35380 |
| | **ಒಟ್ಟು** | **13** | **16.78000** | **16.78000** | **16** | **16.77880** |
| **XVI** | **ರೇಷ್ಮೆ ಬೆಳೆಗಾರರಿಗೆ ಸಹಾಯ-ಗಿರಿಜನ ಉಪಯೋಜನೆ 2851-00-104-0-30-(423)** | | | | | |
| 1 | ಹಿಪ್ಪುನೇರಳೆ ನರ್ಸರಿಗೆ ಸಹಾಯಧನ | 0 | 0.00000 | 0.00000 | 0.00 | 0.00000 |
| 2 | ಹಿಪ್ಪುನೇರಳೆ ನಾಟಿಗೆ ಸಹಾಯಧನ | 11 | 4.95000 | 4.95000 | 11.00 | 4.95000 |
| 3 | ರೇಷ್ಮೆ ಹುಳು ಸಾಕಾಣಿಕೆ ಸೋಂಕು ನಿವಾರಕಗಳ ಖರೀದಿ | 0 | 3.10000 | 3.10000 | 0.00 | 3.09982 |
| | **ಒಟ್ಟು** | **11** | **8.05000** | **8.05000** | **11.00** | **8.04982** |
| **XVII** | **ತಾಲ್ಲೂಕಾ ಪಂಚಾಯತ ಕಾರ್ಯಕ್ರಮಗಳು-ಸಾಮಾನ್ಯ 2851-00-104-0-61(100)** | | | | | |
| 1 | ಹಿಪ್ಪುನೇರಳೆ ನಾಟಿಗೆ ಸಹಾಯಧನ | 3.25 | 1.36000 | 1.36000 | 3.25 | 1.35560 |
| 2 | ತಾಲ್ಲೂಕಾ ಮಟ್ಟದ ವಸ್ತುಪ್ರದರ್ಶನ/ಕಾರ್ಯಗಾರ | 0.00 | 0.00000 | 0.00000 | 0 | 0.00000 |
| 3 | ಕಡಿಮೆ ವೆಚ್ಚ ಶೆಡ್‌ಗೆ ಸಹಾಯದನ | 1.00 | 0.80000 | 0.80000 | 1 | 0.80000 |
| 4 | 225 ಚ.ಅಡಿ ರೇಷ್ಮೆ ಹುಳು ಸಾಕಾಣಿಕೆ ಮನೆ | 1.00 | 0.69000 | 0.69000 | 1 | 0.67500 |
| 5 | ಕ್ಷೇತ್ರೋತ್ಸವಗಳು | 3.00 | 0.05000 | 0.05000 | 1 | 0.05000 |
| 6 | ಕರಪತ್ರ ಮುದ್ರಣ | 0.00 | 0.30000 | 0.30000 | 0 | 0.29000 |
| | **ಒಟ್ಟು** | **8.25** | **3.20000** | **3.20000** | **6.25** | **3.17060** |
| | **ಎಲ್ಲಾ ಯೋಜನೆಗಳ ಒಟ್ಟು** | **549.849** | **432.772** | **394.128** | **548.756** | **393.451** |

ರೇಷ್ಮೆ ಉಪನಿರ್ದೇಶಕರು
ಜಿ.ಪಂ ಬಾಗಲಕೋಟೆ

CamScanner